
K.P.R.

(೧) [illegible]

[illegible]

೧೨-೫-೧೯೫೮

ಪರಾಮರ್ಶೆಗಾಗಿ

ಬಿಡಿ ಕುಸುಮ ೧

ಭಾರತೀ ಭಂಡಾರದ ೧೦ನೆಯ ನಿಧಿ

ನಿಸರ್ಗ ನುಡಿ

ಜಿ. ಎ. ಬಸವರಾಜ

ಶ್ರೀ 'ಕಾವ್ಯಾನಂದ' ರ ಮುನ್ನುಡಿ

ಭಾರತೀ ಸಾಹಿತ್ಯ ಭಂಡಾರ, ಯರನಾಳ

ವಿಜಾಪುರ ಜಿಲ್ಲೆ.

ಫೆಬ್ರುವರಿ ೫೭ ಬೆಲೆ ೦—೧೨—೦ (೭೫ ನಯಾಪೈಸೆ)

ಸಂಪಾದಕರು—
' ಸಿಸು ' ಸಂಗಮೇಶ

ಸಲಹಾಸಮಿತಿ:
ಸರ್ವಶ್ರೀ—
ಸಿಂಪಿ ಲಿಂಗಣ್ಣ ಚಡಚಣ
ಮಿಟ್ಟಿ ಅಣ್ಣಾರಾಯ ಶೇಡಬಾಳ
ಶ್ರೀಕೃಷ್ಣ ಪಾಟೀಲ ಬೆಳಗಾಂವಿ
ಈಶ್ವರಚಂದ್ರ ಚಿಂತಾಮಣಿ ನಾಗಠಾಣ
ಮಹಾಂತ ಗುಲಗಂಜಿ ಬಿಜಾಪೂರ
ಶಂ. ಗುಃ ಸಾರವಾಡ
' ಶಿವಕುಮಾರ 'ಹಳ್ಳಿ (ಜತ್ತ)
ನಾರಾಯಣ ತೊರ್ಕೆ, ತೊರ್ಕೆ
ಬಿ. ರಾಮಚಂದ್ರಭಟ್ಟ ಮುಂಡಾಜೆ
ಪ. ಸೀತಾರಾಮಭಟ್ಟ ಮಿತ್ತಬೈಲ
ಅ. ಅನಂತಯ್ಯ ನಾವಡ ಮಂಗಳೂರು
ಎಸ್. ವಿ. ಕೋನೇರಿಪುರ ಅಯನೂರು
ಕೆ. ಪಿ. ಶಿವಲಿಂಗಯ್ಯ ಮೈಸೂರು
ಮ. ಮಲ್ಲಪ್ಪ ಹಲಗೂರು

ಪ್ರಕಾಶಕರು
' ಹರಿಹರ '
ಭಾರತೀ ಸಾಹಿತ್ಯ ಭಂಡಾರ
ಯರನಾಳ, ಬಿಜಾಪುರ ಜಿಲ್ಲೆ

ಈ ಪುಸ್ತಕದ ಆಯ್ಕೆಗಾರ
ಸಿಂಪಿ ಲಿಂಗಣ್ಣ

ಭಂಡಾರದ-ಸಹಾಯಕರ
ಜೈರಾಮಸುತ
ಜೆ. ಬಿ. ಬೀಳಗಿ
ಎಸ್. ಜಿ. ಯಾವಗ
(ಮುಂದುವರಿಯುವದ

★

ಮುದ್ರಕರು:
ಕರ್ನಾಟಕ ಬಂಧು ಪ್ರ
ಗದಗ.

ಮುನ್ನುಡಿ

ಸಾಹಿತ್ಯಕ್ಕೆ ಎರಡೇ ಸೆಲೆಗಳು— ವಿಶ್ವಪ್ರಕೃತಿ ಮತ್ತು ಮಾನವ ಪ್ರಕೃತಿ. ಮಾನವ ಪ್ರಕೃತಿಯೂ ವಿಶ್ವ ಪ್ರಕೃತಿಯಿಂದ ಅನವರತವೂ ಪ್ರಭಾವಿತವಾಗುವ ಕಾರಣ ವಿಶ್ವ-ಪ್ರಕೃತಿಯೇ ಸಾಹಿತ್ಯಕ್ಕೆ ಮುಖ್ಯ ಪ್ರೇರಣೆ, ಪ್ರಚೋದನೆಯೆಂದರೆ ತಪ್ಪಾಗದು.

ಆದರೆ ವಿಜ್ಞಾನ ಬುದ್ಧಿ ಬೆಳೆದಂತೆ ನಿಸರ್ಗದಿಂದ ದೊರೆವ ಸ್ಫೂರ್ತಿಕಡಿಮೆ ಯಾಗುತ್ತಿದೆ. ವರ್ಡ್ಸ್‌ವರ್ತ್‌ರಂತಹರಿಗೆ ನಿಸರ್ಗವೇ ದೇವರಾಗಿ ತೋರಿದರೆ ಹಾರ್ಡಿಯಂತವರಿಗೆ ಅದು ಜೀವನದ ಕರಾಳ ಸಂಗ್ರಾಮವಾಗಿ ತೋರುತ್ತಿದೆ. ಆದರೆ ವಿಜ್ಞಾನಿಗಳು ಸಹ ನಿಸರ್ಗದ ಬಗ್ಗೆ ಉದಾಸೀನ ಭಾವನೆಯನ್ನಿರಿಸಿ ಕೊಂಡಿಲ್ಲವೆಂಬುದು ಕೆಳಗಣ ಉಕ್ತಿಯಿಂದ ಸ್ಪಷ್ಟವಾಗುತ್ತದೆ.—

"There are three voices of Nature. She joins with us and says 'Struggle Endeavour!' She comes close to us, we can hear her heart beating, She says 'Won-der, Enjoy, Revere' She whispers secrets to us, we cannot always catch her words, she says —'Search, Enquire..' These, then, are the three voices of Nature appealing to Hand, Heart and Head,—to the Trinity of our Being"

—PROF. ARTHUR THOMSON

ನಿಸರ್ಗ ದೇವತೆಗೆ ಒಂದಲ್ಲ ಮೂರು ಧ್ವನಿಗಳು
ಒಂದೊಮ್ಮೆ ನಮ್ಮೊಡನೆ ಸೇರಿ ಆಕೆ ಹೇಳುತ್ತಾಳೆ. "ಹೋರಾಡು
ಪ್ರಯತ್ನಿಸು" ಮತ್ತೊಮ್ಮೆ ಆಕೆ ನಮ್ಮ ನಿಕಟವರ್ತಿ ಆಗುತ್ತಾಳೆ
ನಾವಿಲ್ಲಿ ಆಕೆಯ ಹೃದಯ ಸ್ಪಂದನವನ್ನು ಗುರುತಿ
ಬಲ್ಲೆವು. ಆಕೆ ಅನ್ನುತ್ತಾಳೆ; "ಬೆರಗುಪಡು. ತೋಷಪಡು
ಗೌರವಿಸು," ಮಗುದೊಮ್ಮೆ ತನ್ನೆಲ್ಲ ಮರ್ಮವನ್ನು ನಮಗ
ಸುರುವಳು. ಅವೆಲ್ಲವನ್ನು ಪೂರ್ಣತಃ ನಾವು ಅರಿಯಲ
ರೆವು. ಆಕೆ ಉಸುರುತ್ತಾಳೆ. "ಶೋಧಿಸು ಪರಿಶೋಧಿಸು
ಹೀಗೆ ನಿಸರ್ಗ ದೇವತೆಯ ವಾಣಿ ಮೂರು ತೆರದ್ದು – ಹಸ್ತ
ಹೃದಯ, ಮನಸ್ಸು (ಕರ್ಮ ಭಾವನೆ. ಬುದ್ಧಿ) ಹೀ
ನಮ್ಮ ಬಾಳಿನ ತ್ರೈತ್ವದ ಮೇಲೂ ಆಕೆಯ ಪ್ರಭಾವ.

—ಪ್ರೊ. ಆರ್ಥರ ಥಾಮ್ಸನ್)

'ನಿಸರ್ಗನುಡಿ'ಯ ಕವಿಗಳಾದ ಶ್ರೀ ಬಸವರಾಜರ
ನಿಸರ್ಗದೇವಿಯ ಸ್ವರಕ್ಕೆ ಮನಸೋತಿದ್ದಾರೆ."All Natur
is but art, unknown to thee...." (ನಿಸರ್ಗ
ವ್ರೇ ನೀನರಿಯದ ನಿಲುವದು; ಅದೆಲ್ಲವೂ ಕಲೆ) ಎಂಬ
ದನ್ನು ಮನಗಂಡು ನಿಸರ್ಗದಲ್ಲಿ ಅವಿತಿರುವ ಕಲಾ ಶ್ರೀ-
ಯನ್ನು ಕರಗತ ಮಾಡಿಕೊಳ್ಳುವ ಸಂಕಲ್ಪದಿಂದ ಮುಂದುವ
ರಿದ್ದಾರೆ. ಬಾಲರವಿ, ತೊರೆ, ತಿರೆ, ಮಂದಾನಿಲ, ಬಯಲ
ಪುಷ್ಪ, ಸಸ್ಯಾಳಿ, ತೃಣಾಳಿ, ಜಲಬಿಂದು, ಚಂದ್ರ, ಸಂಧ್ಯಾ
ಇತ್ಯಾದಿ ನಿಸರ್ಗದ ನಾನಾ ಮುಖಗಳೊಡನೆ ಈ ಕವಿ ಸ
ಲಾಡುವದನ್ನು ನೋಡಿದಾಗ ಲಾಂಗ್ ಫೆಲೋ ಕವಿಯ.-

" And he wandered away & away
With Nature the dear old nurse

Who sang to him night & day
The rhymes of the Universe''
(ನಡೆದ ನಡೆವೇ ನಡೆವ ಬಹುದೂರ ಬಹುದೂರ
ಆತಾಯಿ ಮುದಿದಾಯಿ ಪ್ರಕೃತಿಯೊಡನೆ
ದಿನ ಬೆಳಗು ಮಾತಾಯಿ ಹಾಡುತಿದ್ದಳು ಅವಗೆ
ವಿಶ್ವ ಛಂದೋ ರಚತಿಯುಂದವನ್ನೆ !) —
ಎಂಬ ನುಡಿ ನೆನಪಾಗುತ್ತದೆ. ಬಯಲನ್ನು ಕುರಿತು ಕವಿ,
"ನಿನ್ನೆದೆಯು ಅಂಗಳವು ಜಗಕೆಲ್ಲ ಮಂಗಳವು
ನಿನ್ನುಡಿಯು ತೆನೆರಾಶಿ, ಕಾಳು ನಾವು;
ನಿನ್ನಾಳ ಭಾವದಲಿ ಆವಾವ ಕಾಲದಲಿ
ಮಿಂದೆದ್ದು ಬಾಳುತಿರಲಿಲ್ಲ ಸಾವು" ಎಂದು ಹಾಡು ವಾಗ ಈ ತರುಣ ಕವಿಗೆ ನಿಸರ್ಗದ ಎಂಥ ಭವ್ಯ ಕಲ್ಪನೆ ಹೊಳೆದಿದೆಯೆಂದು ಅಚ್ಚರಿಯುಂಟಾಗುತ್ತದೆ.

'ವಸುಂಧರೆಯೆ ಪಾವನ' ವೆಂದು ನಂಬಿ ನಡೆದಿದ್ದರೂ ಈ ಕವಿಗೆ ವಿಶಾಲ ಜೀವನದ ಅನ್ಯ ಮುಖಗಳತ್ತ ಉಪೇಕ್ಷೆಯಿಲ್ಲ.

"ನಕ್ಷತ್ರ ನೌಕೆಯನು ತೇಲಿಬಿಟ್ಟೆ
ಆಕಾಶ ಗಂಗೆಯಲಿ ದಾರಿಗೆಟ್ಟೆ " ಎಂದು ಶೆಲ್ಲಿಯ ಶೈಲಿ ಯಲ್ಲಿ ಹಾಡಿದ ಕವಿ ಮರು ಉಸಿರಿನಲ್ಲಿಯೇ-

"ಕಲ್ಪನಾ ವಿಹಗದಿಂ ಕೆಳಗೆ ಹಾರು
ಮಗುವಾಗಿ ಸ್ವರ ಸುಧೆಯ ಮಧುವ ಹೀರು
ತಾಯಾಗಿ ವಾತ್ಸಲ್ಯ ಜಗದಿ ತೋರು
ತಾಯಿ ಮಕ್ಕಳ ಹಾಡು ತಣಿದುಬೀರು " ಎಂದು ಪರ್ಸಿವರ್ತನ ಮಾರ್ಗಕ್ಕೆ ಮುಟ್ಟುತ್ತಾನೆ ನೆಲ ಮುಗಿಲ ನೆಡನ್ನೂ ದಿಟ್ಟಿಯಲ್ಲಿರಿಸಿಕೊಂಡು ದಿಟ್ಟತನದಿಂದ ಹೊರಟು ತನ್ನ ಪ್ರಥಮ ಕೃತಿಯಾದ ಈ 'ನಿಸರ್ಗನುಡಿ' ಯಲ್ಲಿಯೇ

ಅಲ್ಲಲ್ಲಿ ಪ್ರತಿಭೆಯ ಕಿಡಿಗಳನ್ನು ಹಾರಿಸಿರುವ ಈ ತರುಣನಿಗೆ ಉಜ್ವಲ ಭವಿಷ್ಯ ಕಾದಿದೆಯೆಂದು ನಾನೇಕೆ, ಯಾರಾದರೂ ಹೇಳಬಹುದಾಗಿದೆ.

ಆದರೆ ಒಂದು ಮಾತನ್ನು ಈ ವ್ಯವಸಾಯ ಬಂಧುವಿಗೆ ಹೇಳಿದರೆ ತಪ್ಪಲ್ಲವೆಂದು ತೋರುತ್ತದೆ. ಭಾವ ಬಹುದೂರ ಮುಂದೆ ಹೋಗಿ ಭಾಷೆ ಬಹಳ ಹಿಂದೆ ಉಳಿದರೆ ಕಾವ್ಯ ಸೌಂದರ್ಯ ಕೆಡುತ್ತದೆ. ಕಾರಣ "ಗೆಳೆಯ ಬಸವರಾಜ, ಗರಿ ಯೊಡೆದ ಕಲ್ಪನಾಗರುಡ" ನನ್ನೇರ ಹೊರಟಿರುವ ನೀವು ಕಲ್ಪನಾ ಗರುಡಕ್ಕೆ ಭಾಷೆಯೇ ಗರಿ ಯೆಂಬುದನ್ನು ಮರೆಯ ದಿರಿ! ಶೈಥಿಲ್ಯ, ಸಂದಿಗ್ಧತೆ, ಗದ್ಯತೆಗಳನ್ನು ಜಯಿಸಿ ನಿಮ್ಮ ಕಾವ್ಯ ಭಾವ ಭಾಷೆಗಳ ಸೌಂದರ್ಯಕ್ಕೆ ಕೂಡಲ ಸಂಗಮ ವಾಗುವಂತೆ ಸತತ ಸಾಧನೆಯಿಂದ ಸಿದ್ಧಿಪಡೆಯುವಿರೆಂದು ಹಾರೈಸುತ್ತೇನೆ.

ಯಾರೂ ಅರಿಯದ 'ಯರನಾಳ'ನ್ನು ತಮ್ಮ 'ಭಾರತೀ ಸಾಹಿತ್ಯ ಭಂಡಾರ' ದ ಮೂಲಕ ಸಾಹಿತ್ಯ ಕ್ಷೇತ್ರವನ್ನಾಗಿ ಮಾರ್ಪಡಿಸಿದ ಗೆಳೆಯ 'ಸಿಸು' ಸಂಗಮೇಶರ ಸಾಹಸದ ಕಾರ್ಯದ ಬಗ್ಗೆ ಎರಡು ನುಡಿ ಬರೆಯದೇ ಈ 'ಮುನ್ನುಡಿ' ಮುಗಿಯುವುದು ಹೇಗೆ ? ಸ್ವತಃ ಸಹಜ ಸಾಹಿತಿಗಳಾಗಿ ಅನೇಕ ಹೊಸ ಸಾಹಿತಿಗಳನ್ನು ತಮ್ಮ ಭಾರತೀ ಭಂಡಾರಕೆ ಸೇರಿಸುತ್ತ ನಡೆದಿರುವ ಇವರನ್ನು ಎತ್ತಿ ಹಿಡಿಯುವದು ಎಲ್ಲರ ಕರ್ತವ್ಯ. ಇವರಿಂದ 'ಭಾರತೀ ಭಾಂಡಾರ' ಇನ್ನೂ ಬೆಳೆದು ಅದು ನಮ್ಮ ನಾಡಿನ ಅಮೂಲ್ಯ ಭಾಂಡಾರವಾಗ ಲೆಂದು 'ಸಾಹಿತ್ಯ ಸರ್ವೇಶ್ವರಿ' ಯನ್ನು ಪ್ರಾರ್ಥಿಸುತ್ತೇನೆ.

ಯಾದಗಿರಿ —ಕಾವ್ಯಾನಂದ

೨೨—೨--೫೭

ನಡುವಿನ ನುಡಿ

○

ಗೆ. ಬಸವರಾಜರು, 'ನಿಸರ್ಗನುಡಿ' ಗೆ ನನ್ನ ಅನಿಸಿಕೆ ಬೇಕೆಂದು ಸತ್ತೆಯನ್ನುಪಯೋಗಿಸಿ ಒತ್ತಾಯಿಸಿದರು. ಇಲ್ಲಿಯ ಕವನಗಳೇ ತಮ್ಮ ಅನಿಸಿಕೆಯನ್ನು ಉಸುರುವಾಗ– ಅವುಗಳಿಗೆ ಮುನ್ನುಡಿಯೊಂದು ಕನ್ನಡಿ ಹಿಡಿಯುವಾಗ ಮತ್ತೇಕೆ ಈ ನಡುವಿನ ನುಡಿಯೊಂದು? ಎಂದು ಅನಿಸುತ್ತದೆ. ಆದರೂ ಒತ್ತಾಯಕ್ಕೆ ಒಳಪಟ್ಟವನಾಗಿ ಬರೆಯಬೇಕಾಗಿದೆ.

ಈ 'ನಿಸರ್ಗನುಡಿಯು' ನೈಸರ್ಗಿಕವಾಗಿ ನುಡಿದ ನುಡಿಯಾಗಿದೆ. ನಿಸರ್ಗನುಡಿ; 'ನಿಯತಕರ್ಮ' 'ನೆರವು' ಪ್ರೇಮಗಳಲ್ಲಿ ಏಕತೆಯ ಭಾವ ಸಾದೃಶ್ಯ ಸಂದರ್ಶಿಸಿ, 'ಮಿಲನ' ದಲ್ಲಿ ಸಂದರ್ಶಿಸಿ 'ಮಿಲನ' ದಲ್ಲಿ ನಿರಂತರವಾದ ಸಮರಸದ ಸವಿ-ಸುಖಕ್ಕಿಳಿಸಿ 'ರಸಿಕ' ನಾಗಿ ಕವಿಯು—

"ಬೀಗಿಹುದು ಇನಿರಸವು ನೋಡಿದತ್ತೆಲ್ಲಕಡೆ
ಹನಿಯಂತಿದೆ ಕೊನೆಯಿರದ ಅಮೃತಬಿಂದು
ಬೋಗಿರಸಯೋಗಿ ತಾ ಮಣಿದತ್ತ ದಿನ ನಿತ್ಯ
ತಣಿಯುವನು ಸುಧಾರಸದಲ್ಲಿ ಮಿಂದು" ಎಂದು

ನಲಿನಲಿದು ಹಾಡಿದ್ದಾನೆ. ಕರ್ಮದ ಹಿರಿಮೆಯನ್ನರಿತು 'ಕರ್ತವ್ಯ-ದಕ್ಷತೆ'ಬೇಕು. ಎಂಬವುಗಳಲ್ಲಿ ವಾಡಿಕೆಯಿತ್ತು ಧರ್ಮದ ಬಲ ಒಂದರಲ್ಲಿ ಸಾಕೆನ್ನುತ್ತಾನೆ. 'ಧವಲಜವನಿಕೆ' ಯಲ್ಲಿ ಜನರ ಒಲವಿನತ್ತ ಮನಸೆಳೆದಿದ್ದಾನೆ. 'ಕವಿತೆಗೆ' ಎಂಬ ಕವನದಲ್ಲಿ ನೆಮ್ಮದಿಯನ್ನು ಮನಕ್ಕೆ ನೀಡೆನ್ನುತ್ತ "ಕಸದಲ್ಲಿರಿಸೆ-ದಿಟ್ಟರಸಗಟ್ಟಿ ಈ ಸೃಷ್ಟಿ" ಎಂದೆನ್ನುತ್ತ ಪಾವನತರನೋಟ ಪಡೆದುಕೊಂಡ 'ಕವಿಬಂಧುವಿಗೆ' ಮಣಿದು, 'ಶ್ರೀ ಅಮರ ಅರವಿಂದರ'ಲ್ಲಿ ತನ್ನನ್ನುದ್ಧರಿಸಲು ಸುಧೆ ಸುರಿಸಲು ಕೋರು

ತ್ತಾನೆ. ಜೊತೆಗೆ ಎತ್ತಲೂ ನೆಲೆಯಾದ ದೇವನ ಇರುವಿ
ಯನ್ನು ನೆನೆಯುತ್ತ ಅಳು-ನಗು ಈ ದ್ವಂದ್ವಗಳ ಮಾತೆ
ಕೆಂದು, ಸಾಕುನಿನ್ನ ' ಹುಚ್ಚು ಮೋಜಾಟ ' ವೆಂದು ಕೇ
ಕೊಳ್ಳುತ್ತಾನೆ. ' ತಾಯಿರಕ್ಷೆಯಿರೆ ' ಬಾಳು ಅಮೃತವೆಂದ
ಬಗೆದು ' ಹರಿಸು ಮಾತೆ ' ಎಂದು ಮಾತೆಯಲ್ಲಿ ಮೊ
ಯಿಡುತ್ತಾನೆ.

ಕವಿಸಾಮ್ರಾಜ್ಯದ ಕಲ್ಪನೆಯಲೋಕದಿಂದ 'ವಾಸ್ತ
ದೆಡೆಗೆ' ಸಾಗಿ ' ತೂಗುತಿದೆ ತೊಟ್ಟಿಲು ' ಎಂದು ಲಲ್ಲೆನಾ
' ಮಗು 'ವನ ಮನದ ಯುಕ್ತಿಯ ಶಕ್ತಿಯನ್ನು ಪರಿಚಯಿ
ಕೊಂಡಿದ್ದಾನೆ. ಅಲ್ಲದೆ ಕವಿಗೆ ಬೇಕಾದ ವಿಶಾಲದೃಷ್ಟಿ 'ಸ
ದೃಷ್ಟಿ' ಯಲ್ಲ ಪಡೆದುಕೊಂಡು, ' ರಾಮರಾಜ್ಯ ' ಕಾಣ
ಕಳವಳಗೊಂಡರೂ (ಸಗ್ಗದಲ್ಲಿ) ಹಿಗ್ಗಿನಿಂದ ಏಕೀಕೃತ ಕನ್ನಾ
ಕುರಿತು, ಎದೆದುಂಬಿ ಹಾಡಿದ್ದಾನೆ. ' ಒಂದುನೋಟ ' ದ
ತನ್ನಬಾಳಿನ ಏರಿಳಿತ ಕಂಡು ಆಶಾವಾದಿಯಾದ ಕವಿಯು, 'ನ
ಭಾಗ್ಯ' ಎಂದು ಹಾಡಿಕೊಂಡು ಪೂರ್ತಿಮಾಡಿದ್ದಾನೆ. 'ಚಂದ್ರೋ
ದಯ' 'ಸಂಜೆಯ ಹೊತ್ತು' 'ದೀಪಾವಳಿ' ಕವನಗಳು ಬಣ್ಣ
ಯಿಂದ ಕೂಡಿದವುಗಳಾಗಿವೆ; ಕಾವ್ಯಗಳಲ್ಲಿ ಲಾಲಿತ್ಯವಿ
ಲಾವಣ್ಯವಿದೆ. ಒಟ್ಟಾರೆ, ಪ್ರೇಮಭಾವನೆ, ತತ್ವ ಪ್ರತಿಪ
ದನೆ, ಧರ್ಮ ನಿರೂಪಣೆ, ಯಿಂಥ ಒಳ್ಳೇ ಉಣಿಸಾಗಿದೆ; ತ
ಸಾಗಿದೆ, ನಿಸರ್ಗನುಡಿಯು.

ಗೆ. ಬಸವರಾಜರ, ಮೊದಲಕವನ ಸಂಕಲನವಾದರ
ಕಾವ್ಯಗಂಗೆಯು, ಇಕ್ಕಟ್ಟಿನದಾರಿಯಲ್ಲಿ ಸಾಗುವಾಗ ಕೊಂ
ಛಂದದಲ್ಲಿ ತಡೆವರಿಸಿದಂತೆ ಕಂಡರೂ ಧಾವಿಸಿ ಹರಿದಿದ್ದಾಳೆಂ
ಧಾರಾಳವಾಗಿ ಹೇಳುವದರ ಜೊತೆಗೆ ಈ ತರುಣಕವಿಗಳ
ಉತ್ತಮಭವಿಷ್ಯಕಾದಿದೆ, ಎಂದೂ ಹೇಳಬಯಸುವೆ. ಇ

ರಿಂದ ಸಾಹಿತ್ಯಸೇವೆಯು ಅವ್ಯಾಹತವಾಗಿ ಸಾಗಲೆಂದೂ, ಸಹೃದಯರಸಿಕ ಸೋದರರು ಹೃದಯವಂತಿಕೆಯಿಂದ 'ನಿಸರ್ಗ ನುಡಿ' ಬರಮಾಡಿಕೊಂಡು ಪ್ರೋತ್ಸಾಹಿಸಲೆಂದೂ, ಗೆ. 'ಸಿಸು'– ಸಂಗಮೇಶರು ಇಂಥ ಕವನಸಂಕಲನಾದಿ ರಸಬರಿತ ಹೊತ್ತಿಗೆಗಳನ್ನು ಹೆಚ್ಚಾಗಿ ಹೊರತರಲೆಂದೂ ಮನವಾರೆ ಹಾರೈಸುವೆ.

ಹಿರೇಲೋಣಿ — ಸಿ. ವೀ. ಕೋರೆ
೨೨ಫೆಬ್ರುವರಿ. ೧೯೫೭

ನಮ್ಮ ಪ್ರಕಟಣೆಗಳು

— ಚಿಕ್ಕವರ ಸಾಹಿತ್ಯ—

ಗಣಿಕಲ್ಲು	ಭಾಗ೧	ವಿವಿಧಲೇಖಕರು
ಗಣಿಕಲ್ಲು	ಭಾಗ೨	,,
ಪುಟಚೆಂಡು	ಭಾಗ೧	,,
ಪುಟಚೆಂಡು	ಭಾಗ೨	,,

— ಕಥಾಸಂಗ್ರಹ—

ಹುಚ್ಚರ ರಾಜ್ಯ	....	ಶ್ರೀ ಶಿವಕುಮಾರ
ಗುರುಕೃಪೆ	....	ಶ್ರೀ ಕೋನೇರಿಪುರ

— ರೂಪಕಗಳು—

ಸನ್ಯಾಸಿ ದಿಬ್ಬ	....	ಶ್ರೀ ಸಿಂಪಿ ಲಿಂಗಣ್ಣ

— ಏಕಾಂಕಗಳು—

ಹೋಗಬೇಕೋ ಆಗಬೇಕೋ		ಶ್ರೀ ಹೊಸಮನಿ

— ಕವನಸಂಗ್ರಹಗಳು—

ಜೋಳಬಂದಿ	....	ಶ್ರೀ 'ಸಿಸು'
ನಿಸರ್ಗನುಡಿ	....	ಶ್ರೀ ಜಿ ಎ. ಬಸವರಾಜ

ಕೈಲಾಸ ವಾಸಿ—

ಪೂಜ್ಯ ಮಾತೋಶ್ರೀಯುವರ ಚರಣಗಳಲ್ಲಿ

ಸಮರ್ಪಿತ

ಕಿರು ನುಡಿ

ಸಹೃದಯ ರಸಿಕ;

ಇದು ನನ್ನ ಕವನಗಳ ಪ್ರಥಮ ಸಂಕಲನ. ಇದ ಲ್ಲಿ ನಿಸರ್ಗಕ್ಕೆ ಸಂಬಂಧಿಸಿದ ಕವನಗಳನ್ನು ಕೂಡಿಸ ಲಾಗಿದೆ. ನಿಸರ್ಗನುಡಿ ಹಾಡಾಗಿ ಮೂಡಿಬರುವಲ್ಲಿ ಸ್ಫೂರ್ತಿ ಯಿತ್ತ ಗೆ. 'ಮೇಘ ಮಿತ್ರ'; ಪರಡ್ಡಿ ವೀರಣ್ಣ, ಈಶ್ವರ ಚಂದ್ರ ಚಿಂತಾಮಣಿ, 'ಶಿವಕುಮಾರ' ಮೊದಲಾದ ಸ್ನೇಹಿ ತರನ್ನು ಸ್ಮರಿಸದಿರಲೆಂತು! 'ನಿಸರ್ಗನುಡಿ'ಯ ನಾಲಗೆ ಬಳದೇ ಇರುವಾಗ ತಮ್ಮೆಲ್ಲರೆದುರಿಗೆ ನುಡಿಯುವಂತೆ ನುಡಿ ಕಲಿಸಿ ನಿಲ್ಲಿಸಿದ ಶ್ರೇಯಸ್ಸು, ಮಾಲೆಯಲ್ಲಿ ಬಿಡಿಕುಸುಮ ದಂಮ ಪವಣಿಸಿದ 'ಸಿಸು' ಸಂಗಮೇಶರವರಿಗೆ ಸಲ್ಲಬೇಕು. ಮುನ್ನುಡಿಯಲು ಮಾರ್ಗದರ್ಶಕವಾದ ನೈಸರ್ಗಿಕ ಮುನ್ನು ಡಿಯನ್ನು ಬರೆದು ಹರಸಿದ ಪೂಜ್ಯ 'ಕಾವ್ಯಾನಂದ'ರಿಗೂ, ಬೆಡುಸುಡಿಯ ಪ್ರೋತ್ಸಾಹವಿತ್ತ ಶ್ರೀ ಸಿ. ವೀ. ಕೋರಿ ಶುವರಿಗೂ, ಕವನಗಳನ್ನು ಪರಿಷ್ಕರಿಸಿ ಅಚ್ಚಿಗೆ ಅಪ್ಪಣೆ ಯಿತ್ತ ಆಧ್ಯಾತ್ಮ ಸಾಹಿತ್ಯ ಪ್ರವರ್ತಕರೆಂದು ಖ್ಯಾತರಾದ ಕನ್ನಡದಲ್ಲಿ ಹಿರಿಯ ಸಾಹಿತಿಗಳಾದ ಶ್ರೀ ಸಿಂಪೀ ಲಿಂಗಣ್ಣ ನವರಿಗೂ ನಾನು ಚಿರಋಣಿಯಾಗಿರುವೆನು. ಜೊತೆಗೆ ಸುಂದರ ಮುಖ ಚಿತ್ರ ಬರೆದ ಶ್ರೀ ಕೆ. ಪಿ. ರಾಘಪ್ಪನವ ರಿಗೂ, ಮುದ್ರಣ ಮೇಲ್ವಿಚಾರಕರಿಗೂ ನನ್ನ ಅಭಿನಂದನೆ ಗಳು. 'ನಿಸರ್ಗನುಡಿ'ಯಿಂದ ಕೊಂಚವಾದರೂ ತಮಗೆ ಸಂತಸವಾದರೆ ನನ್ನ ಶ್ರಮ ಸಾರ್ಥಕ. ಸಹೃದಯರ ಸಲಹೆ ಸೂಚನೆಗಳು ನನ್ನ ಮುಂದಿನ ಕೃತಿಗೆ ಮಾರ್ಗದರ್ಶಕ ವಾಗುವವೆಂದು ನಂಬಿದ್ದೇನೆ.

ಝಳಕಿ.

ಮಹಾಶಿವರಾತ್ರಿ ೧೯೫೭

ಜಿ. ಎ. ಬಸವರಾಜ.

ನಮ್ಮ ನುಡಿ

"ನಿಸರ್ಗ ನುಡಿ" ಬಿಡಿ ಕುಸುಮುವನ್ನು ಸೇರಿ
ಸಾಧನೆಯ ಮತ್ತೊಂದು ಮೈಲಿಗಲ್ಲನ್ನು ದಾಟುತ್ತಿದ್ದೇವೆ
ಎಂದಿನಂತೆ ಇದನ್ನು ಸ್ವಾಗತಿಸುವರೆಂದು ನಂಬಿದ್ದೇನೆ
ಒಂದು ಮಾತು, ನಮ್ಮ ಶಿಕ್ಷಕರು ನಮ್ಮ ಪ್ರಕಟಣೆಗಳನ್ನು
ಕುರಿತು ಒಂದೆರಡು ಮಾತನ್ನು ಬರೆಯುವ ಕೃಪೆನಾಡ
ವದಿಲ್ಲವಲ್ಲವೆಂದು ವಿಷಾದವೆನಿಸುತ್ತ ಹಾಗೆ ಸಲ
ಸೂಚನೆ ನೀಡುವಿರಾಗಿ ಆಶಿಸಿದ್ದೇನೆ.

ಶ್ರೀ ಬಸವರಾಜರು ಬಿಜಾಪೂರ ಜಿಲ್ಲೆಯ ಝಳ
ಯಲ್ಲಿ ಶಿಕ್ಷಕರಾಗಿದ್ದಾರೆ. ಉತ್ತಮವಾಗ್ಮಿಗಳು. ಇವ
ಮಾತಿಗೆ ಮನಸೋಲದವರು ಕಡಿಮೆ. ಇವರು ಎಂ
ಗ್ರಾಮದಲ್ಲಿಯೇ ಕೆಲಸ ಮಾಡಲಿ. ತಮ್ಮ ಕಾರ್ಯ ತತ್ಪರತೆ
ಸ್ನಿಗ್ಧ ಸ್ನೇಹ, ಕ್ರಾಂತಿಯುತ ಸತ್ಯ ನಿಷ್ಠುರ ಸವಿಮಾತ
ಗಳಿಂದ ಸಮಾಜವನ್ನು ಅನುಕೂಲತೆಯನ್ನಾಗಿ ಮಾ
ಕೊಳ್ಳುವ ಮಂತ್ರ ಮುಗ್ಧತೆ ಇವರಿಗೆ ಸಾಧಿಸಿದೆ. ಕವನ
ಕಥೆ, ನಾಟಕ ವಿಮರ್ಶೆ ಹೀಗೆ ಸಾಹಿತ್ಯದ ವಿವಿಧಾಂ
ಗಳಲ್ಲಿ ತಮ್ಮ ಲೇಖನಗಳನ್ನು ಪಳಗಿಸುತ್ತಲಿದ್ದಾರ
ಸಾಹಿತ್ಯ ಸೇವೆಯಲ್ಲಲ್ಲದೆ ಸಾಮಾಜಿಕ ಕಾರ್ಯಕ್ರಮಗಳ
ಯೂ ಅಷ್ಟೇ ಯಶಸ್ವಿ ರೀತಿಯಿಂದ ಕಾರ್ಯ ನಿರ್ವಹಿಸುತ್ತಾ
ಕಥಾ ಸಂಗ್ರಹ ನಾಟಕ ಇತ್ಯಾದಿಗಳು ಹೊರಬರಲಿವೆ

ಮುನ್ನುಡಿಯ ಮೆರಗನ್ನಿತ್ತ ಶ್ರೀ 'ಕಾವ್ಯಾನಂ
(ಸಿದ್ದಯ್ಯಾ ಪುರಾಣಿಕ ಬಿ. ಎ. ಎಲ್. ಎಲ್. ಬಿ. ಡೆಪ್ಯು
ಕಲೆಕ್ಟರ ಯಾದಗಿರಿ) ಅವರಿಗೂ ಕುಸುಮವನ್ನಿತ್ತ
ಬಸವರಾಜರಿಗೂ, ನೆರವಾಗುವ ಗೆಳೆಯರಿಗೂ ಪ್ರಕಾ
ರಿಗೂ ಅನಂತ ಉಪಕೃತಿಗಳು

ಹೊನಗನಹಳ್ಳಿ 'ಸಿಸು' ಸಂಗಮೇಶ

— ಪರಿವಿಡಿ —

ಅರಿಕೆ

ಅಖಂಡ ಕರ್ನಾಟಕ ಪ್ರಾಥಮಿಕ ಶಿಕ್ಷಕರ ಉತ್ತಮ ಪುಸ್ತಕಗಳನ್ನು ಪ್ರಕಟಿಸಿ ಶಿಕ್ಷಕರ ಬರೆವಣಿಗೆಗೆ ಪ್ರೋತ್ಸಾಹ ನೀಡುವವರ ಜೊತೆಗೆ ಮಕ್ಕಳಿಗೆ ಉತ್ತಮ ಸಾಹಿತ್ಯವನ್ನೂ ಒದಗಿಸುವ ಹೆಗ್ಗುರಿಯನ್ನಿಟ್ಟುಕೊಂಡು ನಾಡಿನ ನಾಲ್ಕೂನಿಟ್ಟಿನ ಪ್ರಾಥಮಿಕ ಶಿಕ್ಷಕರ ಸಮಿತಿಯೊಂದನ್ನು ನಿರ್ಮಿಸಿ ಹೆಜ್ಜೆ ಇಡುತ್ತಿದ್ದೇವೆ. ಅದಕ್ಕೆ ನೆರವು ಕೋರಿದ್ದೇವೆ.

ಮಾಲೆಯ ನಿಯಮಗಳು

ವಾರ್ಷಿಕ ವಂತಿಗೆ ಕೇವಲ ೨-೮-೦ (ಅಂಚೆಸಹಿತ) ಕರ್ನಾಟಕದ ಬೇರೆ ಬೇರೆ ವಿಭಾಗದ ಪ್ರಾ. ಶಿ. ರ. ಕಥೆ, ಕಾದಂಬರಿ, ನಾಟಕ, ಕವಿತೆ ಇತ್ಯಾದಿ ನಾಲ್ಕೈದು ಕೃತಿಗಳು ೪೦೦ ಪುಟಗಳಲ್ಲಿ, ಎಪ್ರೈಲದಿಂದ ಎಪ್ರೈಲಕ್ಕೆ ಒಂದು ವರುಷ. ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳೂ ದೊರೆಯುವವು. ಶ್ರೇಷ್ಠ ಕೃತಿಗಳನ್ನು ಪ್ರಕಟಿಸಿ ಚಂದಾದಾರರಾದವರಿಗೆ ಮೂರ್ಲಾಂಶ ಬೆಲೆಯಲ್ಲಿ ಕೊಡುವೆವು. ಪತ್ರವ್ಯವಹಾರ ಕಾಲಕ್ಕೆ ಚಂದಾಸಂಖ್ಯೆ ಅವಶ್ಯ ತಿಳಿಸಬೇಕು.

ನಮ್ಮ ಶಿಕ್ಷಕರ ಮಾಲಿಕೆ ಸಾಕಷ್ಟು ಹಿರಿದಾಗಿದೆ ನಿಜ. ಎಲ್ಲ ಶಿಕ್ಷಕಮಿತ್ರರೂ ಸಾಕಷ್ಟು ಆಸ್ಥೆವಹಿಸಿ ಸಹಾಯ, ಸಹಕಾರ, ಸಹಾನುಭೂತಿಗಳನ್ನು ತೋರಿ ನೆರವು ನೀಡಿ ದಲ್ಲಿ ಬೇಕಾದ ಕಾರ್ಯಗಳನ್ನು ಸಾಧಿಸಿ ನೆಲದ ಮರೆಯ ನಿಧಾನದಂತಿದ್ದ ಶಿಕ್ಷಕಮಿತ್ರರನ್ನು ಸೇವೆಗೆ ಅಣಿಗೊಳಿಸುತ್ತೇವೆಂಬ ಧೈರ್ಯ ನಮಗಿದೆ. ಈ ಯೋಜನೆಯು ಯಶಸ್ವಿಯಾದಲ್ಲಿ ಮಕ್ಕಳ ಸಾಹಿತ್ಯವನ್ನೂ ಚಂದಾಕ್ರಮದ[illegible] ಕೊಡುವ ವಿಚಾರವಿದೆ.

(೬೫ ನೇ ಪುಟ ನೋಡಿರಿ.

ನಿಸರ್ಗನುಡಿ

○

ಬಾಲರವಿ—

(ಪ್ರಶಾಂತ ತೊರೆಯನ್ನು ಕಂಡು ಮಂದಹಾಸದಿಂದ)

ನಾನೆದ್ದು ಕಣ್ಣುಮಿಟುಕುವ ಸಮಯ ಚೆಲುವಿಕೆಯು
ಚೆಲ್ಲಿರುವ ರನ್ನಸರ ನೀನು ಕಾಣ್ಪೆ !
ಸಾನುರಾಗದ ಭಾವ ಸಲಿಸಿರುವ ನಾದೇವ ?
ಶಾಂತಿ ತಾ ಶಾಂತಿಯೆಡೆ ಸಾಗು ಕಾಣ್ಪೆ !
ಬರಸಿಡಿಲಿನಬ್ಬರವು ಬೆಂಸಲಿರೆ ಸಮರಸವು
ಸಹನತೆಯು ಸಂತತವು ಬೇಕುತಾನೆ !
ಸರಸದಲ್ಲಿ ಸುಧೆಯಿಹುದು ಏನೆಲ್ಲ ಅರಗುವದು
ನಿನ್ನ ಸಮಧನ್ಯಮನ ಕಾಣೆ ಜಾಣೆ !

ತೊರೆ—

[ರವಿಯ ಮಂದಸ್ಮಿತ ನುಡಿಗೇಳಿ]

ನೆಲದಾಯಿ ಸಲ್ಪೇವಿ ತಾಕರುಣೆಯಿಂ ಶೀವಿ
ಹರಿಸಿ ಇಳುಕಲ ನಿರಿಸೆತೀರ ಮೀರೆ
ಬಲವು ತಾನಿರೆ ಮುದದಿ ಬೆಲೆಯಿರಲಿ ಈ ಜಗದಿ !
ಮುಂಬರಿಯೆ ಬಲವೆಲ್ಲಿ ? ಎಲ್ಲೆ ಮೀರೆ
ಹುರುಪು ನೀಡುವಾ ವನ ಮಾರುತನ ಹಿರಿಯ ಗುಣ

ನಿತ್ಯ ವಿರೆ ಸತ್ಯದೆಡೆ ನೋಟ ಚಾಚಿ
ಕರಪಿಡಿದ ದರಿಯುದಯ ಮಾರುತನ ವರ ಮಾಯೆ
ಸುರಿಯದಿರೆ ಬಾಳಿಲ್ಲ ಬರಿಯ ಕೊಳಚಿ!
ಬರುವದೇನಿಹುದೆಲ್ಲ ತರುವುತ್ತಲಿರೆ ಬೆಲ್ಲ
ಅರಿಯುತ್ತ ಹರಿಯುವದೆ ನನ್ನ ಕರ್ಮ
ಕರೆಯುವದು ಸವಿಧಾರೆ ತೋರುವದು ಧ್ರುವತಾರೆ
ತಾಬಲ್ಲದಿಹುದೆಲ್ಲಿ ? ಸರಸ ಮರ್ಮ !
ಈ ರೂಪ ತೊಡಿಸಿರುವ ಈ ಬಲವ ನಿರಿಸಿರುವ
ಪರಮನಿಗೆ ನಮಿಸಲದು ನನ್ನ ಕೆಲಸು !
ಹಾರೈಕೆ ಕೋರಿರುವೆ ಪೂರ್ವದೆಡೆ ಸಾಗಿರುವೆ
ನೆರವಿರಲು ನನ್ನವರ ಕರುಣ ಮನಸು !

ಬಾಲರವಿ—

[ನೆಟ್ಟದಿಟ್ಟಯಿಂದ ಕಣ್ಣರಳಿಸಿ]
ಸಿರಿಯ ಬಸುರಿನ ಕೂಸ ತಿರೆಗೆ ಸೊಗ ತಹಹಾಸ
ಮಿರುಗು ಬಣ್ಣಕೆ ಸೋತು ಕರವ ಚಾಚಿ
ಬರೆ ನಾನು ಆಗ ಏರಿ ಎದೆಯುಬ್ಬು ಮೀರಿ
ತಬ್ಬಲೆಳೆಸುತಿದೆ ಮನ ನಿನ್ನ ಬಾಚಿ
ಮಧುರತಮ ಬಾಳ ಮುದ ಹಗಲಿರುಳು ಸವಿ ಸವಿದು
ನಿನ್ನವರು ನೀಡುವರು ನಿನಗೆ ಮಾನ
ಎದೆ ಬೀಣೆ ಮಿಡಿತಾನ ಹನಿಯುತಿದೆ ಸವಿಜೇನ
ತಣಿಯುತಿದೆ ನನ್ನವನ ಕೇಳಿಗಾನ !

ತೆರೆ—

[ನುಡಿಕೇಳಿ ಆತುರದಿ]

ಪುಣ್ಯ ಪುರುಷನ ವಚನ ಮನ್ನಿಸದೆ ನನ್ನಮನ ?
ನಿತ್ಯನೋಡುವ ಜಗಕೆ ನೀನೆ ಕಣ್ಣ
ಗಣ್ಯಗುಣಗಳು ಬಂದು ವೈಯೆತ್ತಿ ನೆರೆನಿಂದು
ಅಹುದಹುದು ಸುರಿಸುವದು ಸವಿಯು ಗಿಣ್ಣ!
ಸಾನಂದ ರಸ ರೂಪ ನಶಿಸುವದು ಮನತಾಪ
ಧರಿಸಿರುವೆ ನಾಸ್ತಿಯಲಿ ಕೊರಳ ಹಾರ !
ಮನವು ಇರೆ ಮಾರ್ಗದೊರೆ ಅಮರಧಾರೆ ಕರೆಯುತಿರೆ
ನನಗಿಲ್ಲ ನೆರವೀವ ಕಾರ್ಯಭಾರ !
ಪಿಡಿದಿರುವೆ ಶಾಂತಿಯನು ಪಡೆದಿರುವೆ ಕಾಂತಿಯನು
ನಿನ್ನಧರ ಬಲುಮಧುರ ತಾರೆ ಪ್ರೀತಿ
ಕುಡಿದು ನಿನ್ನೆದೆಯೋವಿ ನಾನಾದೆ ನಲ್ದೇವಿ
ಒಬ್ಬರಿಂದೊಬ್ಬರಿಗೆ ತುಂಬ ಪ್ರೀತಿ !

ಮಂದಾನಿಲ—

[ಕಳ್ಳ ಹೆಜ್ಜೆಯನ್ನಿಡುತ್ತ ಎಲ್ಲವನ್ನೂ ಕೇಳಿ]

ಚಣ ಬಿಡದಲೆಯುತಿರುವೆ ಅನುಭಾವನಾಂತಿರುವೆ
ಹೊರತೋರಲಹುದವರ ಭಾವಬಿಂಬ
ತಣಿಯುತಿರೆ ಮನಬೀಗಿ ಸಾಗಿರುವೆ ನೆಲಕೆರಗಿ
ನಿನ್ನಮರ ಬಾಳ ಹದಬಲ್ಲ ಸಾಂಬ !
ತಿದು ತಿರುಗಿ ಬೇಸರವು ಕಳೆಯೆ ನಿನ್ನುಸಿರವು

ಬರುವೆ ಮುತ್ತಿಡಲೆಂದು ನಾನು ಸಾಗಿ
ಅರಳಿಸುತ್ತಿರೆ ಮನಸು ನಿನ್ನಶಾಂತಿಯು ಉಣಿಸು
ತಳೆಯುತ್ತ ಕುಣಿಯುವೆನು ತಂಪುಬೀಗಿ
ನಿನ್ನ ಮಂಜುಳ ಮೊರೆತ ಸೆಳೆಯುತ್ತಲಿರೆ ನಿರುತ
ನೆರೆಯೆ ರಸಿಕರ ಬಳಗ ಬೆರೆಯೆ ಸರಸ
ಸನ್ನುತದಿ ಸಾರುವರು ರಸ ಕಹಳೆಯೂದುವರು
ಭಜಿಸುತಲಿ ತವಿಸುವರು ತಮ್ಮ ವಿರಸ !

ಬಯಲು—

[ಸ್ಥಾಯಿಭಾವದಿಂದ ಎಲ್ಲರನ್ನುದ್ದೇಶಿಸಿ]

ಕುಸುಮಾಳಿ ತಾನರಳಿ ನಗೆಯ ಸೂಸುತ ಹೊರಳಿ
ತೂರಲಾ ಮಕರಂದ ಆರ ಶಕ್ತಿ ?
ಎಸೆದು ನಳನಳಿಪ ಲತೆ ಉಸಿರುತಿಹುದಾರ ಕತೆ ?
ಬಾಗಿ ತೋರುವದೇಕೆ ನಿಮಗೆ ಭಕ್ತಿ ?
ನಿಮ್ಮಿಂದ ಈ ಜಗವು ನಿಮ್ಮಿಂದ ಈ ಸೊಗವು
ನೀವಿರಿಸೆ ನಿಮ್ಮಮರ ತುಂಬನೋಟ
ನಿಮ್ಮೆಲ್ಲರೀ ಕೂಟ ತರುವುತ್ತಲಿರೆ ಮಾಟ
ನೀಡುವುದು ದಿನ ನಿತ್ಯ ರಸದ ಊಟ !

(ಬಾಲರವಿ, ತೊರೆ,ತೆರೆ, ಮಂದಾನಿಲ — ಆದರದಿ)

ನಿನ್ನೆದೆಯ ಅಂಗಳವು ಜಗಕೆಲ್ಲ ಮಂಗಳವು
ನಿನ್ನಡಿಯ ತೆನೆರಾಶಿ ಕಾಳುನಾವು
ನಿನ್ನಾಳಭಾವದಲಿ ಆವಾವ ಕಾಲದಲಿ

ಮಿಂದೆದ್ದು ಬಾಳುತಿರಲಿಲ್ಲ ಸಾವು !
ಏರಿಲ್ಲ ಇಳುವಿಲ್ಲ ತಗ್ಗುಮುಗ್ಗುಗಳಿಲ್ಲ
ಕಾಲಬಾಧೆಯು ಮಿಲ್ಲ ನೀನು ಅಮರ
ತೋರುತಿದೆ ತಾ ಕೀರ್ತಿ ಸ್ಥಾಯಿಭಾವದ ಮೂರ್ತಿ
ಶಾಂತಿ ಕದಡಿಸದು ಈ ವಿಶ್ವ ಸಮರ !

[ಎಲ್ಲವೂ ಒಟ್ಟಾಗಿ ಏಕಕಂಠದಿಂದ]

ಸಮರಸದಿ ನಾವಿರಲು ಚೇತನಕೆ ಕಳೆ ಬರಲು
ಈಶನಾಲೀಲೆಯಲಿ ಕಾಲು ಸವಿಸೆ
ಸಮರಸವು ಸಮನಿಸಲಿ ಸಂತತವು ವಿಶ್ವದಲಿ
ಆದಿಸತ್ವನಾಣತಿ ನಾವು ಧರಿಸೆ !

ನಿಯಾತಿ ಕರ್ಮ

೦

ಎಲರು—

[ಮುಂಜಾವದಲಿ ನಲಿವ ಪುಷ್ಪ ಕಂಡು]

ಒನಪಿನಲಿ ತಲೆದೂಗ್ವ ಹರುಷದಾ ಚಿಹ್ನ
ಮೃದು ವಧರಗಳು ಆಗಲೆ ರದನದಾ ಜೊನ್ನ
ಹರಡಲಿನ್ನಾರು ಗುಣ ಪಾಡಿದರು ನಿನ್ನ
ಆಳಿಬಳಗವಿಲ್ಲಿಲ್ಲ ನಾಬಂದೆ ಮುನ್ನ

ಪುಷ್ಪ—

ಹೊಗಳಿಕೆಗೆ ಮೆಚ್ಚುಗುಣ ನಾನರಿಯನಲ್ಲ
ತುಂಬಿಗಳ ಇನಿಗಾನ ನನ್ನೊಲುಮೆಗಿಲ್ಲ
ಸ್ವಾನಂದ ಸ್ವರತಾನ ಗಾಯಕನೆ ಬಲ್ಲ
ಮುಖಸ್ತುತಿಯ ನಾನೆಂದು ಗಣಿಸುವಂತಿ

ಎಲರು—

ಉತ್ತರಿಸಲುಂಟು ಬಹುಮಾತುಗಳರೀತಿ
ದಿನ ಬೆಳಗೆ ಪಾಡುವವು ನಿನ್ನಯಾ ಖ್ಯಾತಿ

ಆಲಿಸುತಲಾತುರದಿ ನೀನು ಮನಸೋತಿ
ನಲುಮೆಯಲಿ ಬಂದುಣಿಸು ಬಗೆಯ ನೇಮರತಿ

ಪುಷ್ಪ—

ಹಲವರಲಿ ಸಹಜಗುಣರೀತಿ ತಾನುಂಟು
ಬಾಳುವಾ ಜೀವನಕೆ ಬಿಡದಂಥ ಗಂಟು
ನಿಸ್ಪೃಹದಗುಣ ನನ್ನ ಹೃದಯಕೆ ಅಂಟು
ನನ್ನೆದೆಯ ಸೌರಭವ ನೀ ಕೊಳ್ಳುವದುಂಟು ?

ಎಲರು—

ಜಗ ಜೀವ ದುಸಿರುನಾ ನನ್ನುಸಿರಿ ಜಗಕೆ
ನನಗಾಗಿ ಇರದೆನ್ನ ಬಾಳು ತಿಳಿ ಮನಕೆ
ನಿನಗೊಲೆಯೆ ಸುರ–ನರರು ನಿನ್ನ ಸದ್ಗುಣಕೆ ?
ಅದು ತಾನೆ ಸಾಧ್ಯ ? ನಾಬರದೆ ಈ ಬನಕೆ

ಪುಷ್ಪ—

ತಿರೆಯ ಗುಣ ಹೊತ್ತು ನೀ ಸಂಚರಿಪ ಹರಕೆ
ಪರಿಮಳವದಿರಲು ತಾಕರ್ಮವತಿ ಮುಖ್ಯ
ದರುಶನವುಸಾಕೆನಲು ಬಿಡಬೇಕೆ ಶಕ್ಯ ?
ಅರಿಚಣವ ತಡೆಯುದಲೆ ಬಳಿಸೋಣ ಸಖ್ಯ !

ಎಲರು—

ಈ ನುಡಿಯನಾಲಿಸಿಲ್ಲಿಂದ ಸಾಜಾರಿ
' ಹೂ ' ವಲ್ಲ ನೀ ಸೊಪ್ಪೆ ಜೀವಿರದೆ ಹಾರಿ

ತಿಳಿವಿರದ ನುಡಿಗೇಳಿ ನಾಪೋಗಲಾರೆ
ಜರಿದರೂ ಪರ ಹಿತವು ಬಲ್ಲವರ ಕಾರ್ಯ

ಪುಷ್ಪ—

ಜನಿಸಿ ಬಂದವಗಿಲ್ಲವೆಂದಾಯ್ತು ಮರಣ !
ಸರ್ವರಲಿ ಸರಿನೋಟ ಕಳಕಳಿಯ ಕರುಣ
ತಾನಿರಲು ತೊಲಗಿದವು ಅಗಣಿತದ ಹರಣ
ಸಾವಿನೆಡೆಯಲಿ ಸಾಕ್ಷಿ ನೀನೆಂಥ ಸುಗುಣ ?

ಎಲರು—

ನನ್ನಂಗದಂಶವೇ ಜೀವನದ ಉಸಿರು:
ಸೆರೆಯಿಂದ ಹೊರಬಂದು ಸೇರೆನ್ನ ಬಸಿರು
ಸಾವೊದಗಿತೆನೆ ಸಾಕ್ಷಿ ನನ್ನದೇ ಹೆಸರು ?
ತತ್ವ ನಾಲ್ವೇರಾಗೆ ಈ ಹೆಸರು ಕೆಸರು ?

(ಪುಷ್ಪಉತ್ತರಿಸುವಷ್ಟರಲ್ಲಿ ಎಲ್ಲವನ್ನೂ ಕೇಳುತಲಿದ್ದ ಬಂ

ಬಯಲು—

ಕಾಲದೇಶ ವ್ಯೆಗೊಂಡಂದೆನ್ನ ನೋಟ—
ಕಾಣುವದು ವಿಶ್ವದಾನಂತ ಬಗೆಮಾಟ
ಸ್ನೇಹ ಸಹಕಾರಗಳ ವಿಮಲತರ ಕೂಟ
ನಲುಮೆ ಯೊಲುಮೆಯಾನಂದದೀ ರಸದೂ

ಬಿಡದು ನಿಮ್ಮಾ ನಿಯತ ಕರ್ಮ ಕೇಳಿಲ್ಲಿ
ಗುಣಧರ್ಮ ತೊರೆದು ನಡೆಯಲು ಬರುವದೆಲ್ಲಿ ?
ಎಲ್ಲರಿರುವಿಕೆಯನ್ನ ಜಗದೀಶ ಬಲ್ಲ !
ಆತನಾಣತಿಯಂತೆ ನಡೆಯೆ ಗುಣವೆಲ್ಲ !

ನೆರವು

೦

ಸಸ್ಯಾಳಿ—

[ಸಪ್ಪೆ ಮುಖದಿಂದ]

ಕಳ್ಳಹೆಜ್ಜೆಯಲಿ ಸಿಳ್ಳ ನೂದುತಲಿ
ಎಲ್ಲರುಸಿರು ಬಂದ !
ಹಳ್ಳಕೊಳ್ಳ ಅಡಿಯಾಡಿ ಕಡಲ ತಡಿ-
ಸೇರಿ ಏನುತಂದೆ ?
ಇಳೆಯ ಪಾಲಕನು ಪ್ರಳಯ ಕಾರಕನು
ನೋಡೆ ಕಾಣದವನು
ಬಳಿಯ ಸಾರುವನು ನಿಲ್ಲದೋಡುವನು
ಬೇಸರಿಲ್ಲದವನು
ಆಟವಾಡಿ ಹುಡಿ ಹುಡುಗರಂತೆ ನಡಿ
ಚೆಂದಳೆಯುವ ತುಂಟ
ರೈತಳಿಯ ಬಲು ಭಯದಿ ತೋರಿ ನಲು
ಮುಂಬರಿಯುವ ಬಂಟ
ಒಣಗಿದೆಲೆಯ ತನುವುಟ್ಟ ಹೂವಮುನ
ತಟ್ಟಿ ಕುಣಿಯುವ ತಾನು
ಬನದ ಬಸುರಿನಲಿ ಬಿನದದಳೆದಲೆವ
ನೆುಲುಹಾಸ ಕಾಣು !

ತರುಮರಾದಿಗಳ ತಲೆಯದೂಗಿಸುವ
ರಸಿಕ ನೇಹಗಾರ
ಕೊರಗಿ ಸೊರಗುವೆವು ಸುರತ ಸುಖ ತರುವ
ತರುಣಿ ಬರವ ಸಾರ
ಸರಸಿಜಳಾಕರಿ ಹೇಳ ಆರಡಿಯ
ನುಡಿಯ ಕೇಳುವಾಗ !
ವಿರಹ ದಹಿಸುವದು ಹರಣ ಹಾರುವದು
ಸಹನೆಯಿಲ್ಲ ನಮಗ
ಉಷಾ ಕೆಳದಿಯಾ ಮುದ್ದು ಮಾತುಕಿವಿ-
ಗಿಳಿಯೆ ಮಧುರ ಕಳೆಯು
ಆಸೆಯಡಗಿ ನಡುಹಗಲಿನಲ್ಲಿ ಬೇ-
ಸರವು ಬೀಸಿ ಬಲೆಯು !
ನಿಶಾದೇವಿಯೊಡಲೊಸುಗೆಯಲ್ಲಿ ಮನ-
ಮನಸಾರೆ ಏನೊ ಉಂಡು !
ಈಸುದಿನ ತವಿಸೆ ಬರುವ ದಿನಗಳಲಿ
ಜಸದ ಕನಸು ಕಂಡು !
ಹಸಿವೆ ನೀರಡಿಕೆ ಹಿಂಗಲಾರದಕೆ
ಶಕ್ತಿ ಸಾಲದಿನ್ನ
ಬೆಸನದಲ್ಲಿ ಹುಡಿಗೂಡಿ ಆಡೆ ಬಿಡಿ-
ಒಡವೆಯಾಗು ಮುನ್ನ
ಎದೆಯಕಾತರತೆ ಬೀರಿ ಕರೆದು ತಾ-
ವಿಶ್ವದಂಚೆಯಾಳು
ಮಿದುವು ಮಾತಿನಲಿ ಮತಿಯ ಆದರಕೆ
ಸೋಲದಂತೆ ಹೇಳು

ಬೀದಿಯಲ್ಲಿ ದಣಿವಾಗದಂತೆ ಕೆಲ-
ಭಾವ ಬಣ್ಣತೋರು !
ಮೋದದಲ್ಲಿ ಕರಕರಗಿ ನೆರೆದು ಬರೆ
ಮತ್ತೆ ಮುಂದೆ ಹಾರು !
ಜಗದ ಬಾಳ ಪಡಿಯಚ್ಚದಂತೆ ಹಿಡಿ
ಹಲವು ರೂಪ ತೊಡಿಸು
ಸೋಗೆ ನವಿಲ ಕುಣಿ ತಾನು ನಲಿದು ಮಣಿ-
ವಂತೆ ಹೃದಯ ಮಿಡಿದು
ನಿನ್ನ ಪಯಣ ಬಿಡುವಿಲದಂತೆ ನಡು
ಸುಖದಿ ಸಾಗಿ ಬರಲಿ
ಚೆನ್ನವಾಗಿ ಹದಗೊಂಡ ಹೃದಯ ಮುದ
ನಿನ್ನ ಬರವು ತರಲಿ !
ಚೆನ್ನವತ್ತಡದಿ ಮುಖವು ಕಪ್ಪಿಡಿದು
ದಾರಿ ತುಳಿದು ಹಣ್ಣು
ಬನ್ನ ಬಟ್ಟನಮಗೆಲ್ಲ ನೋಟವದು
ಒಪ್ಪು ಕರಿಯ ಕಣ್ಣು
ಕಣ್ಣು ಮಿಂಚು ಹೊಳೆ ಹಾಡು ಗುಡುಗುತಳೆ-
ವಂತೆ ಕಿವಿಯು ಊದು
ಬನ್ನಿ ಮಣ್ಣಿನುಡಿ ತುಂಬ ತನ್ನಿ ಬಿಡಿ-
ಮುತ್ತುಗಳನು ಕೋದು !
ಸುಳ್ಳಿ ಕಳ್ಳತನದಾಟವಾಡೆ ಮನ
ಬರದು ಹೋದ ಹೊತ್ತು
ನಿಲ್ಲದೋಡಿ ಬರೆ ಆಗ ಜೋಡುಇರೆ
ಹಾಕ ಬೇಡ ಸುತ್ತು

ಜಾಳು ಬಳ್ಳಿ ಮೊದಲಾಗಿ ಎಲ್ಲದಕು
ಬೇಕು ನೀನೆ ನೋಡು ।
ತಾಳ ತಪ್ಪುವದು ಬೇಗೆ ಬಲಿಯುವದು
ಈಗ ಬೇಡ ಹಾಡು !
ಪೌರುಷ ತುಂಬಿರಲಿ ವೇಗ ಕುಂದಿರಲಿ
ಇರಲಿ ನಿನ್ನ ಕಕ್ಷೆ
ಬರಲು ನಮ್ಮ ಬಳಿ ತರಲು ಬೇಕು ಕಳೆ
ಬೇಡನಮಗೆ ಶಿಕ್ಷೆ !
ಮೀರ ಮಧುರ ನುಡಿ ಇಲ್ಲ ತಡೆದು ಹಿಡಿ
ಬಿಡದೆ ನೀರಧರನ
ತೋರು ನಿಜದ ನೆಲೆ ರೂಪ ಕಿಲ್ಲ ಬೆಲೆ
ಕರ್ಮಿಗಿಹುದು ಜನನ !
ನೂತನ ಉಡದಿರೆ ಮರಳಿ ಜನನಬರೆ
ಇದುವೆ ಜಗದ ಕೊನರು !
ಓತು ಇಳಿಯೇ ಮಳೆ ಪ್ರೀತಿ ತುಂಬಿ ಬೆಳೆ
ಧನ್ಯರಿಳೆಯ ಜನರು!
ನುಗ್ಗಿ ಕಡಲ ಕಡೆ ಹಿಗ್ಗಿ ನೆರವು ಗೊಡೆ
ಸುಗ್ಗಿ ಕಾಣು ಕುಣಿದು !
ಕುಗ್ಗದೆಮ್ಮ ಮುಖ ದಾನಿಯಿರಲು ಸಖ
ಬದುಕಲಹುದು ತಣಿದು

ಎಲರು—

[ಮೆಲ್ಲನೆ]

ಬೆಳಗು ನೆಯ್ದಬಲೆ ತಂಪ ನೆರೆವ ಕಲೆ
ಹಿತವು ಒಲವಿನಿರವು
ಬೆಳೆಯುಲನುಗುಣವು ರವಿಕಿರಣ ಬಲವು
ಬಾಳಿ ಬದುಕೆ ನೆರವು
ಬೈಗು ಬರೆದ ಬರೆ ಹಿಡಿಯೆ ಮನಸು ಸೆರೆ
ಚೆಲುವು ಸೆಳೆಯೆ ದಿಟ್ಟ
ಬೀಗಿ ಕರೆದ ನೊರೆ ಚಂದ್ರ ಹಾಲು ನೆರೆ
ತಿರೆಯು ರಸದ ಗಟ್ಟಿ
ಕಾಳ ರಾತ್ರಿಯುಡಿ ಮಾಡೆ ನಮ್ಮ ಮಡಿ
ಲಾಸ್ಯ ವಾಡೆ ನಗೆಯು !
ಕಾಳು ತುಂಬಿ ತೆನೆ ಜೀವ ತುತ್ತಿ ತೊನೆ
ಅಹುದು ನಗೆಯ ಬಗೆಯು
ತೊರೆಯು ವಿಮಲ ಜಲ ಮಾಗಿನಿಂದ ಫಲ
ರುಚಿಸ ದಿರದೆ ರಸನೆ !
ಅರಳಿದಲರಡೆದೆ ಸುರಭಿ ತರದಿರದೆ
ಮಾಡೆ ತುಂಬಿ ಭಜನೆ
ಕಡಲು ಕುದಿದು ಕೊಡೆ ಮೋಡವೆತ್ತಿ ಹಿಡೆ
ಆಡೆ ನನ್ನ ಕೂಡಿ
ನಡೆಯು ಲಾಡಿ ತಣಿ ತಾಸು ಮತ್ತೆ ದಣಿ
ಗುಡುಗು ರೋಷ ಹಾಡಿ

ಕೆಂಪುಕಣ್ಣುಕುಡಿ ಸಿಡಿಲು ಹೃದಯ ಮಿಡಿ
ಕನಲು ಕರಗಿ ನೀರು
ಪೆಂಪು ಬಿಚ್ಚಿ ಹರಿ ಮೇಲಿನಿಂದ ಸರಿ
ಭಾವ ಬಣ್ಣ ನೂರು
ಅಲ್ಲಿ ಅಂತರದಿ ಇರುಳು ಹೊಳೆವನದಿ
ಕಾಣಲೆಂಥ ಸೊಗವು !
ಕಲ್ಲು ತಾಳೆ ನಯ ಇಲ್ಲದಾಗೆ ಭಯ
ಪ್ರೇಮವಾಳೆ ಜಗವು !
ರವಿಯು ನಲುಮೆ ನುಡಿ ಗ್ರಹಗಳೆಲ್ಲ ಮುಡಿ
ನಡೆವ ಗಾಣದೆತ್ತು ।
ವಿಶ್ವ ಕಣ್ಣುತೆರೆ ದೇವ ನೊಲುಮೆಯಿರೆ
ತಾಳೆ ನೀರು ಮತ್ತು
ಪುಟಿಯೆ ಪ್ರೇಮ ರಸ ಅಲ್ಲಿ ಜೀವಕಸ
ಸುರರ ಬಾಳ ಹದವು !
ದಿಟದಿ ಬಂದು ಎಳೆ ಪಿಡಿದು ಜೀವ ಬೆಳೆ
ಶಾಂತಿ ತವರು ಮುದವು
ಈಗ ನಿಮಗೆ ಹದ ಉಣಿಸಲದೋ ಮುದ
ತಂದ ನೀಲ ಧರನು !
ಮುಗಿಲು ಕೂಡೆ ನೆಲ ನೋಡಲಲ್ಲಿ ಹಲ-
ಭಾವ ವೆತ್ತಿ ಇಹನು
ಸೊಗಸು ಸುಂದರತೆಗೆಂದು ಎದೆಯೊರತೆ
ಚೆಲುವು ಯಾಗೆ ಕೊನೆಗೆ
ಗಗನ ಸಂಚಲನ ನೀಗೆ ಭೂಮಿಲಯ
ಎರವು ಬಾನ್ವನೆಗೆ

ಜೀವ ಜೀವನಕೆ ನೆರವು ಇರುವನಕೆ
ಸಾವು ದೂರ ದೂರ !
ಭಾವ ಶುದ್ಧತೆಗೆ ಆಸರಿರಲು ಮಿಗೆ
ಬದುಕು ಮಧುರ ಮಧುರ !

ಸಸ್ಯಾಳಿ—

[ಸಂತಸದಿ]

ಎತ್ತರೆತ್ತರಡೆ ಚರಿಸೆ ಹಿಗ್ಗಿದೆದೆ
ಅರಳೆ ಜಗದ ಮನವು !
ನಿತ್ಯಕಾಲದಲಿ ಸ್ತುತ್ಯ ಸ್ಮರಣದಲಿ
ಸ್ಥಾಯಿ ನಿಮ್ಮ ಗುಣವು !
ಸ್ಫೂರ್ತಿ ಗೊಳ್ಳತನು ದಯದ ದಿಟ್ಟಿಯನು–
ಏರಲು ಮುದ್ದರೂಪ
ಆರ್ತ ರಿಂಗಿತವು ಅರಿತ ನಿಮ್ಮರವು
ಹೊಳೆವ ದಾರಿದೀಪ

ವಸುಂಧರೆಯೆ ಪಾವನ

೦

ತೃಣಾಳಿ—

[ನಿತ್ಯವೂ ಮುತ್ತನೀವ ಜಲಬಿಂದು ಕಂಡು]

ಸದ್ದಿಲ್ಲದಾಗಮಿಸಿ ಮುದ್ದೀವ ಬಗೆಯೇನು !
ಇದ್ದೆಲ್ಲಿ ಹಗಲೆಲ್ಲ ಅರಸದನದ ಸೂನು ?
ಎದ್ದೊಡನೆ ಬರಲಾರ ನುಡಿಯ ಹೊದ್ದುವೆ ನೀನು ?
ಮಧ್ಯಾಹ್ನ ಬರೆ, ತಡೆವ ಬಿರುಗಣ್ಣಿನಾ ಭಾನು !

ಜಲಬಿಂದು—

[ಪ್ರಸನ್ನ ವದನದಿಂದ]

ಬರಿ ಬಯಲಿನರ ಮನೆಯೆ ಮೊದಲಿನಾ ಹಿ
ಇರುಳು ಮೊಲೆಯೂಡಿನಾ ಮೂಡಿದಾ ನ
ತೆರೆದೆದೆಯ ಸುಸ್ಥಾನ ನನಗಿರಲದುವೆ ಗೊ
ಬರಲಾರ ನುಡಿಯೇಕೆ ? ಬೆರೆಯಲಿರೆ ವ
ಉಷೆಯು ಸಂಧಿಪ ಹೊತ್ತು ನಾನಿರಲು
ಬಿಸಿಲಿನಲಿ ಬರಲೆಲ್ಲಿ ಭಾನುವಿನ ತಡೆ

ತೃಣಾಳಿ—

[ಅಕ್ಕರೆಯಿಂದ]

ಎನಿತೊಂದು ಮೃದು ಹೃದಯ ಎನಿತೊಂದು ನಿನ್ನೊಲವು
ಸಲೆನಿನ್ನ ಮನವು ಎನ್ನೆದೆ ತೊಯ್ಸಿ ಬಲು ಚೆಲುವು
ಕಲೆನಾವು ಬರಲಹುದು ಚೆಲುವಿಕೆಗೆ ತಾ ಬಲವು
ಒಲವು ನಲುವಿನ ಚೆಲುವು ನಿಜಬಾಳಿನಾ ನಿಲುವು.

ಜಲಬಿಂದು—

[ಸಿಧಾನದಿಂದ]

ಹಸಿರು ಸೀರೆಯ ಜಾಣೆ ನಿನ್ನುಸಿರು ಸವಿಗಾನ !
ಬೆಸುಗೆ ಹುಸಿಯುಲುಕಾಣೆ ಗಂಟಲಕೆ ತಾಗಾಣ !
ಜಸವಿರಲು ಬೆಸುಗೆ ತಾ ಮಿಡಿಯಲಹುದು ತನನನ !
ರಸವಿರಲು ಸಗ್ಗಸರಿ ವಸುಂಧರೆಯೆ ಪಾವನ !

ತೃಣಾಳಿ, ಜಲಬಿಂದು—

[ಭಾಷ್ಪಯುತವಾಗಿ]

ತಳಿತಬಾಳಿನ ವಿಲಸ ಪ್ರೇಮವೇ ವರಕಳಸ !
ಒಲಿದೆದೆಯ ಸರಸ ಸಗ್ಗಿಗರಾ ಸುಖದ ಬೆಳಸ ! !
ನೆಮ್ಮದಿಯು ಹೊಮ್ಮಿಹರಿಯಲದುವೇ ಧನ್ಯತೆಯು
ನಮ್ಮ ಬರೆದಾ ವಿಶ್ವಕವಿಗಿರಲಿ ಮಾನ್ಯತೆಯು !

ಕವಿತೆಗೆ

○

ಭಾವ ಬಸಿರನೆ ಬಗೆದು ಛಂದದ
ಬಂಧ ಹೊಂದಲು ಕೊಂಕದೆ
ಕಾವ್ಯ ಹೆಸರನೆ ಧರಿಸಿ ಧ್ಯೇಯವ—
ನೆದೆಯಲಿರುಸುತೆ ಬಿಂಕದೆ
ಮಿರುಗು ಬಣ್ಣವ ತಾಳಿ ಕವಿಕುಲ
ಭಾವಗನ್ನಡಿಯಾಗುತ
ಬೆರಗು ಬೀರುತ ಶಬ್ದಮಣಿಗಳ
ಮಾಲೆಹರುಷದೆ ಬೆಳೆಸುತ
ನೀರಿನಲೆಯಲಿ ನೀನು ಕುಣಿಯುತ
ಹಸರು ವಸನವ ಧರಿಸುತ
ತೂರಿ ಬೀಸುವ ಎಲರ ನೇರುತ
ಬಿರಿದ 'ಹೂ' ನಗೆ ತೋರುತ
ಕಾಕ ನೋಟವ ಸಾಕು ಮಾಡುತ
ನೆಮ್ಮದಿಯ ನೀನೆರೆಯುತ
ನಾಕಲೋಕದಿ ನಲಿದು ನೂಕಲು
ಒಲಿದು ಬಾ ಕೈತಟ್ಟುತ

ಮಿಲನ

೦

ಬಯಲಿನಲ್ಲಿ ಸಂಚರಿಸುವ ಚಂಚಲೆ
ನಯನ ನೋಟ ಏನು ಮಾಟ ಮಿಂಚಿಲೆ
ತಿರೆಗೆ ಆವ ಕರೆಯ ನಂಬಿ ಬಂದೆಲೆ
ಗಿರಿಯ ನಲುಮೆ ಸೆಳೆತ ನಿನಗೆ ಇಂಬಿಲೆ

ಕರೆಗೆ ಬರುವದೆ ಧರ್ಮವೆ ?
ಸರಿಯೆ ನಿನ್ನಯ ಮರ್ಮವೆ ?

ಮರುಕಗೊಂಡು ಸೋನೆದಾಳಿ ಮರಳಿದೆ
ದರಿಯ ಆದರದೆಡೆ ಬಿಡದೆ ಹೊರಳಿದೆ
ನಂಬಿದಲ್ಲಿ ಇಂಬು ಎಲ್ಲಿ ತೋರುವೆ ?
ನಂಬಿದಲ್ಲೆ ಬೀದಿಕಾಣೆ ಉರುಳುವೆ !

ಚಲನೆಯಲ್ಲಿಯೆ ಶಕ್ತಿಯೆ !
ಒಲವಿನಲ್ಲಿಯೆ ಭಕ್ತಿಯೆ ?

ಕಾಣದೆಳೆಯನಾಂತು ಬಳೆದು ಬಂದುದೆ
ನಿನ್ನಗತಿಯನಪ್ಪಿದುದನು ಹೊಂದಿದೆ ?
ಎರಡು ಕಾಣ್ಬದೆಲ್ಲಿ ಎಂಥ ಮಿಲನವೆ !
ಬರಡು ಏಕೆ ಎಳೆಯ ಬಾಳು ಹೊನಲವೆ ?

ತೊರೆಯೆ ಮಿಲನದ ಸೌಖ್ಯವು
ದೊರೆಯೆ ನಂಬಿಗೆ ಮುಖ್ಯವೆ ?

ಇಳಿಸಿ ಇಳೆಗೆ ಹರಿಸಿದಂಥ ಶೈಲವು
ಬೆಳೆಸಿ ನಡೆಯೆ ಶಕ್ತಿಯಿತ್ತ ಮಾರ್ಗವು
ರೂಪ ತಾಳಿದಂದು ನಿನಗೆ ನಂಟವೆ ?
ಕೋಪವಿಲ್ಲ ಹೊರಳಿ ದಿಟ್ಟಯುಂಟವೆ ?

ಮುಂದೆ ಕಾಣುವ ಮಾರ್ಗವೆ
ಸಂಧಿಸುವದೇ ಸ್ವರ್ಗವೆ ?

ನಂಬಬೇಕು ನಂಬಬೇಕು ಸಾಜವೆ ?
ನಂಬಿಗೆಯಲ್ಲಿಂಬಿಡಲದು ಓಜವೆ ?
ನಂಬಿವಲ್ಲಿ ನಿನಗೆ ಸಾಂತವಲ್ಲವೆ ?
ಸಾಂತಸಾಂತಿದಲ್ಲಿ ಸಾಂತ್ವನೆನ್ನುವೆ ?

ನಂಬಿದಲ್ಲೀ ನಿಯಮವೆ ?
ಸಾಂಬನೆಡೆಗೇ ನೇಮವೆ ?

ಚಂದ್ರೋದಯ

○

ತಿಳಿಗಗನ ಕೊಳದಲ್ಲಿ
ಹೊಳೆವ ತಾರಾಗಣವು
ಕಳೆತುಂಬಿ ನೆರೆದು ತೇಲುತ್ತಲಿದ್ದು
ಸುಳಿವೇಳು ಕಮಲಗಳು
ಸಪ್ತ ಋಷಿ ಮಂಡಲವು
ಧ್ರುವ ಕಮಲ ಸುತ್ತಲವು ಹೊಂಚಿಸಿದ್ದು
ಬಿಣ್ಪಾದ ತಾವರೆಯು
ಕೆಂಪಾದ ಮಂಗಳವು
ಪೆಂಪಾಗಿ ತೋರಿತ್ತು ನಿಚ್ಚಳಿದ್ದು
ಪುಂಡರಿಕ ಗುರು ಶುಕ್ರ
ತೊಂಡಲವು ವರಚಕ್ರ
ದುಂಡಾಗಿ ಕಂಡವವು ತೂರಿ ಮುದ್ದು
ಹಸಿಯುಟ್ಟು ಮಾರುತನು
ನಸುನಗುತ ನಿಶೆಯಳಿಗೆ
ಶಶಿಬರುವ ಸುದ್ದಿಯನು ಸಾರುತ್ತಿದ್ದ
ಸೂಸುತಲಿ ಬಿಳುನಗೆಯ
ಸೋತು ಮನರೋಹಿಣಿಗೆ
ಆ ಸರಸಿಯಲಿ ಶಶಿ ಈಸು ಬಿದ್ದ!

ಸಂಜೆಯ ಹೊತ್ತು

೧

ತೆರೆಯ ಮರೆಯಲಿ ನೆಲೆಸಿ
ಕರಕಾಂತಿ ಕೊನೆ ಸಲಿಸಿ
ರವಿಯು ತಾಹಿಗ್ಗಲಿಸಿ
ಭುವಿಯ ನಯ ಒಗ್ಗಲಿಸಿ
ನಸುಗೆಂಪು ರಸ ಸುರಿಸಿ
ಬಿಡಿಸಿಹನು ಅದೊ ಪರದಿ
ಪಡುವಣದ ದಿಕ್ತಟದಿ

ಮಾರ್ಪಾಡಿನೋಳ್ ಹರ್ಷ
ಏರ್ಪಡಿಸಲಿದೆ ವರ್ಷ
ವನನಾಮ ತಾನುಳಿದು
ಇನನಾಣತಿಯ ತಳೆದು
ಹಗುರಾಗಿ ಗರಿಗೆದರಿ
ನೆಗೆದು ನಭವನ್ನೇರಿ
ಬಳಕುವಾ ತೆಳುಬಳ್ಳಿ
ಒಳಗೆದಳ್ಳುರಿ ಕೊಳ್ಳಿ !
ಪಶುಪಕ್ಷಿ ಏನೆಲ್ಲ
ವಸುಧಿ ರೂಪಗಳಲ್ಲಿ

ಕರಗಿ ಬೇರೊಂದಾಗಿ
ನೆರೆದು ಇನ್ನೊಂದಾಗಿ

ಜಗದ ಸೊಗವನೆ ಹೊದ್ದು
ನಗೆಯ ಬೀರುತಲಿದ್ದು
ಒಡಕು ಬಡ ಕರಿಮುಗಿಲು
ಪಡುವಣದ ದಿಶೆಯುಗಲು
ಓ! ಗೆಳೆಯ ಕಾಣಲ್ಲಿ!
ಹೇಗಿಹುದು ಮುಗಿಲಿನಲ್ಲಿ.

ಒಂದೊಂದು ಘುಂದಾಗಿ
ಅಂದ ಬೀರುತ ಬೀಗಿ
ಕಾಣದಾ ಎಳೆಯಲ್ಲಿ
ಹೆಣೆದು ಕೊಂಡಿಹವಲ್ಲಿ!
ತೂಗು ಹಾಕಲು ಸಾಲು
ಬಿಗಿದಲ್ಲಿ ನಡುಕೋಲು
ಆದರೂ ನೆರೆದೆಲ್ಲ
ನೋದ ತೋರುವವಲ್ಲ!
ಸಾಲು ದೀಪಗಳಲ್ಲಿ!
ಮೋಲು ನೀಲಿಮೆಯಲ್ಲಿ!

ಕೇಳ್ ಗೆಳೆಯ! ದುಡಿಮೆಗೆ
ನಾಳಿನ ಭುವಿ ಬಾಳಿಗೆ

ಹೊಸ ಚೇತನ ಪಿಯೂಷ—
ಒಸರಿ ತರುತಿದೆ ಹರುಷ
ಆ ತೆರೆಯು! ಆ ಮುಗಿಲು!
ಆ ದೀಪಗಳ ಸಾಲು!!
ಇರುಳಿ ನಾದ್ಯಂತವೂ
ಸುರಸೃಷ್ಟಿ ಗೈಯುವವು!!!

ಬೇಕು

○

ಇರುಳ ತಿರೆಯು ತಣಿಸಲು
ಪೆರೆಯು ಕದಿರ ಹೆಣೆಯಲು
ತರಣಿ ಕಿರಣ ತಾಪವ–
ಬೇಕು
ತಾನು ಕುಡಿಯಲು !
ಜಗವು ಸೊಗವ ಪಡೆಯಲು
ಹಗಲು ಇರುಳು ನೀಡಲು
ಘಳಿಗೆ ಗಂಟೆಯಾಗಲು
ಬೇಕು
ವಸುಧಿ ಭ್ರಮಿಸಲು !
ನಲಿವ ಶಾಂತಿ ಬೆರೆಯಲು
ಬಾಳು ಸುಧೆಯ ಸುರಿಯಲು
ಹಾಳು-ಗೋಳು ತೊರೆಯಲು
ಬೇಕು
ರೋಷ ಮರೆಯಲು !
ಶಕುತಿ ತಾಳಿ ಬಾಳಲು
ಭಕುತಿ ತಾನು ಬೆಳೆಯಲು
ಮುಕುತಿ ಕಾಂತಿ ಸೂಸಲು
ಬೇಕು
ಮನುಜ ಶ್ರಮಿಸಲು !

ಒಂದು *

○

ನೆಲದಲಿ ಸಾಸಿರ ಬೆಳಸುಗಳು
ಬಾಡುತ ಒಣಗುವವು
ಬೆಳೆಗಳು ಬೆಳೆಯಲು ಕಳೆತಗೆದರುತಾ
ನೀರಿನ ಬಲವೊಂದು
ಬಾಳಲಿ ಸಾಸಿರ ಕಷ್ಟಗಳು
ಕುಟುಕುತ ಕುಣಿಯುವವು
ಬಾಳಿಗೆ ಬಲವನು ನೀಡುವದದುತಾ
ನಲುಮೆಯ ಒಲುವೊಂದು
ಮನಸಿನ ಬಯಕೆಯು ನೂರೊಂದು
ಹೊಂದಲು ಕಳಕಳವು
ಮನಸಿಗೆ ತಣಿವನು ತೀಡುವದದುತಾ
ಸಾಕೆನು ನುಡಿಯೊಂದು
ದಿನದಿನ ಸಾಸಿರ ಹೂವುಗಳು
ಬಿರಿಯುತ ನಗುತಿಹವು
ಬನದಲಿ ಪರಿಮಳ ಬಗೆಬಗೆಯಿದ್ದರು
ಜೇನಿನ ಸವಿಯೊಂದು
ಜನರಲಿ ಸಾಸಿರ ಪಂಥಗಳು
ಹೆಮ್ಮೆಗೆ ಮೂಲವವು
ಮನಕತಿ ನೆಮ್ಮದಿ ತರಲಹುದದುತಾ
ಧರ್ಮದ ತಿರುಳೊಂದು

---

* ಶ್ರೀ "ಜಚನಿ" ಯವರನ್ನು ಕಂಡು.

ಧವಲ ಜವನಿಕೆ

○

ಇನಸುದಯಾಸ್ತ ಪೆರೆಯು ಬಾನಲಿ
ಬರುವ ಸೊಬಗವ ತೋರುವೆ
ಮನುಜ ಬುದ್ಧಿಯ ಯಂತ್ರ ಸೃಷ್ಟಿಯ
ನಾಂತು ಹೃದಯದಿ ಮೆರೆಯುವೆ !
ಗಿರಿಯ ಭಾರವ ಹೊದ್ದು ಬಾಗದೆ
ತೊಯ್ಯೆ ಹೊಳೆಗಳು ಹರಿಯಲು
ಉರಿಯು ಉರಿಯಲು ಸುಡದೆ ನಡುಗಲು
ಅರಿಯ ಗಾಳಿಯು ಬೀಸಲು
ಭಟರ ವಾಜಿಯ ಕಾಲಧೂಳಿಗೆ
ಮಲಿನ ಮಾಡಲು ನೀಗದು
ಭಟರ ರಕುತದ ಬುಗ್ಗೆ ಪುಟಿದರು
ಕಲೆಗಳಂಟಲು ಬಾರದು !
ಒಲಿದ ಹೃದಯದಿ ನಲುಮೆ ರಸವನು
ಎರೆದು ಎರಕವ ಹೊಯ್ಯುವೆ
ಹಲವು ಜನರಲಿ ತಿಳಿಯೆ ಬೆಳಕವ
ದುರಿತ ದೋಷವ ನೆಯ್ಯುವೆ!
ನಾಡ ಹಿರಿಯರ ತೋರಿ ನಯನಕೆ
ಹಬ್ಬದೂಟವ ಗೈಯ್ಯುವೆ !

ಮೋಡಿ ಮಾಡುತಿ ದಿನವು ನಿನ್ನೆಡೆ
ಜನರ ಮನ ಸೆಳೆದೊಯ್ಯುವೆ
ಮೂರು ತಾಸಿನ ಮೇರೆ ಯಲ್ಲಿ ಯೆ
ನೆರಳ ತಿರೆಯನು ನೀಡುವೆ !
ತೋರಿ ನಟಿ-ನಟರಂಗ ಕಲೆಯನು
ಮನದ ಜಾಡ್ಯವ ದೂಡುವೆ
ನಿನ್ನ ಮೇಲಣ ದೃಶ್ಯಕಾಣುತೆ
ನಲಿದು ಕುಣಿಯುತ ತಣಿವರು !
ನಿನ್ನ ಕಾಣಲು "ಧವಲ ಜವನಿಕೆ"
ನೆರೆದ ಮನುಜರು ದಣಿವರು !

ವಾಸ್ತವದೆಡೆ

○

ಗರಿಯೊಡೆದ ಕಲ್ಪನಾ ಗರುಡ ನೇರಿ
ಇರುಳು ಬಾನೆತ್ತರದ ಏರು ಸೇರಿ !
ಹರಳುಗಳ ಹೊಳಪಿನಾ ಹೊಳೆಯು ಮೀರಿ
ಹರಗೋಲ ಹತ್ತಿರವೆ ಸೊಬಗು ಸೂರೆ !

ನಕ್ಷತ್ರ ನೌಕೆಯನು ತೇಲಿ ಬಿಟ್ಟೆ
ಆಕಾಶ ಗಂಗೆಯಲಿ ದಾರಿ ಗೆಟ್ಟೆ !
ಧ್ರುವ ಚಿಕ್ಕೆ ಚುಕ್ಕಾಣಿ ತಡೆಯಗಟ್ಟೆ
ಸಗ್ಗದಾ ಬೀದಿಯಲಿ ಬಂದು ಮುಟ್ಟೆ

ಬೆಳ್ಳಿ ಮಂಚವ ತೂಗು ಬೆರಗು ಗೊಳಿಸೆ
ತಳ್ಳಿ ತೂಗಲು ಹೇಳೆ ಮನದ ಭಾಸೆ
ಕುಳ್ಳಿರಲು ಹಗ್ಗವನು ಹಿಡಿವ ಆಸೆ !
ಹಳ್ಳಿ ತೊಟ್ಟಿಲ ಮಾಯ ಬಲೆಯ ಬೀಸೆ !

"ಟ್ಞಾ" ಎಂದು ಅಳುವ ಸ್ವರ ಕೇಳಬಂತು
ತಾಯ್ತನದ ಗಾರುಡಿಯು ಮೌನ ತಂತು !
ನುಡಿಯಡಗಿ ಸ್ನಿಗ್ಧರಸ ಧಾರೆ ನಿಂತು !
ನಗೆ ನಲಿದು ಒಳದನಿಯು ಮಿಡಿಯಿತಿಂತು

ಕಲ್ಪನಾ ವಿಹಗದಿಂ ಕೆಳಗೆ ಹಾರು !
ಮಗುವಾಗಿ ಸುರ ಸುಧೆಯ ಮಧುವ ಹೀರು
ತಾಯಾಗಿ ವಾತ್ಸಲ್ಯ ಜಗದಿ ತೋರು !
ತಾಯಿ ಮಕ್ಕಳ ಹಾಡು ತಣಿದು ಬೀರು !!

ತೂಗುತಿದೆ ತೊಟ್ಟಿಲು

○

ಸಾಗಿ ಸುಖ ಬೀಗಿ ತರುತಿದೆ ತೊಟ್ಟಿಲು
ತೂಗುತಿದೆ ಬಾಳು ಸೌಖ್ಯದ ನಿಟ್ಟಿಲು !
ನಲ್ಲ ನಲ್ಲೆಯರ ನಲುಮೆ ಲತೆಯೊಗೆದ
ಮಲ್ಲಿಗೆಯ ಹೂವ ತಾ ಬಿಡದೆ ಮುಡಿದು
ಪಲ್ಲವಿತ ಬಾಳಬನದಲ್ಲಿ ಪಿಕದ–
ಸೊಲ್ಲಿರದ ಸ್ವರವ ಲಲ್ಲೆಯಲಿ ಪಡೆದು !
ಹೋಗಿ ನಲಿದೊಲಿದು ಬರುತಿದೆ ತಟ್ಟಲು
ಸಾಗಿ ಸುಖ ಬೀಗಿ ತರುತಿದೆ ತೊಟ್ಟಿಲು !
ಬಿನದ ಬಿಂಬವನು ಬಸಿರಿನಲ್ಲಿರಿಸಿ
ಮನಕೆ ನೆಮ್ಮದಿಯು ತಾ ತಂದಿರಿಸಿ
ಮನೆಯ ಜನಮನದ ಜೇಂಗೊಡವುಗಳಿಸಿ !
ತಣಿವ ತೀಡುತಿಹ ಮಣಿಯನೇ ಧರಿಸಿ
ಭಾಗ್ಯದಿ ಕುಣಿವುದು ಚಾಲನೆ ಹುಟ್ಟಲು
ಸಾಗಿ ಸುಖ ಬೀಗಿ ತರುತಿದೆ ತೊಟ್ಟಿಲು
ದೇವ ನೋವಿಯಲಿ ಬರುವ ಬಾಳ್ತೊರೆಯು
ಸವೆಯದೇ ಸಾಗಲು ಸಲಿಸಿದ ಮಳೆಯು !
ಕಾವನೊಲಿದಿತ್ತ ಕಾಣಿಕೆಯ ಬೆಳೆಯು !!
ಸವಿಯ ಸವಿಯುತ ಸಂಧಿಸಿ ಹರುಷವ

ಸೊಗಸಿನ ಮುದ್ದೆಯು ನಿರಿಸಿದ ಬಟ್ಟಲು
ಸಾಗಿ ಸುಖ ಬೀಗಿ ತರುತಿದೆ ತೊಟ್ಟಿಲು!

ನಿಶ್ಚಲದ ರೂಹಿನಾ ಹೂವ ತಳೆದು
ಕರ್ಮದಾ ಜೀವಿಯು ಮುರುಮುವನಿರುತ
ಕೂರ್ಮೆಯು ಧರುಮದ ಅಮೃತವನು ಸುರಿದು
ಪೆರ್ಮೆ ಬಾಳಿನ ಓಜವ ಸರಿತರುತ!

ತ್ಯಾಗ ಭೋಗದಾ ಮಿಲನದ ಮೆಟ್ಟಲು
ಸಾಗಿ ಸುಖ ಬೀಗಿ ತರುತಿದೆ ತೊಟ್ಟಿಲು !

ರಸಿಕ

○

ಹಕ್ಕಿಗಳ ಸವಿಗಾನವಾನಂದಮುದಯದಲಿ
ಸಲಿ ನಲಿದು ಒಲಿದೊಲಿದು ತೇಲುತಿತ್ತು !
ಉಕ್ಕಿ ಬಹ ಹರುಷದಲಿ "ಹೂ"ವಿನೆದೆಗೆಂಪು ತಾ
ಸರಸದಲಿ ಬಯಲಿನಲ್ಲಿಡುಗುತಿತ್ತು
ಇರುಳಿನಾ ಕರುಣೆಯಲಿ ಮಿಂದೆದ್ದು ತಂಗಾಳಿ
ಕಂಪೂಡಿ ಮೆಲ್ಲಡಿಯನಿಡುತಲಿತ್ತು !
ಪೆರಿಯ ನಗೆ ಹಿಗ್ಗುಂಡ ಕಡಲುಬ್ಬು, ಚಣ ಬಿಡದೆ
ರಸಿಕನೆದೆ ತಾನಿರದೆ ತುಂಬುತ್ತಿತ್ತು
ತನು ಮರೆದು ನಿಂದಿರಲು ಸಹಜ ಸುಂದರಿಯಳಿಗೆ
ರಸಿಕನಿಂ ಧನ್ಯತೆಯು ದೊರೆಯುತಿತ್ತು
ಚಣಗಳನು ಹೊಸೆಯುತ್ತ ಭೂತದಲಿ ತುಂಬುತ್ತ
ಕಾಲುರುಳು ಮೆಲು ಮೆಲನೆ ಉರುಳುತಿತ್ತು
ಹೆಸರಿಸಲು ಬಾರದೀ ಸಂಭ್ರಮವು ನಾಕದಿಂ
ನೆಲಕಿಳಿದು ಬಂದಂತೆ ತೋರುತ್ತಿತ್ತು
ಸೃಷ್ಟಿ ತನ್ನಯ ಕರ್ಮ ತಾನು ನೀಗಿಸಲೆಂದು
ಹೆಣಗುತ್ತ ವಿಸ್ಮಯವ ಬೀರುತಿತ್ತು
ಭಯಗೂಡಿ ನೆಲನೆರತ ಧೂಳಿಯಾ ಹೋಳಿಯಲಿ
ಬೊಬ್ಬಿಡುತ ಬಿರುಗಾಳಿ ತೂರಿಬಂತು !

ಸಮದಿಂಪ ಸಲಿಸಲಿದು ರಸಬಿಂದು ಜೇಂಗೊಡವಿ
        ತುಂಬಾ ಸುಮಗಳಿಗೆ ಸಾವು ತಂತು !
ಮರೆಯಲ್ಲಿ ಮಲಗಿದ್ದ ಮುಗಿಲುಗಳ ಹೊತ್ತಂದು
        ಭೋರ್ಗರೆದು ಬಾಂದಳದಿ ಹಾಸುತಿತ್ತು
ತಿರೆಯಿಂದ ಮುಗಿಲು ಗುಡಿ ಸೇರಿ, ರಸ ಋಷಿಯುಸಿರು
        ನಿತ್ಯತೆಯ ಗೀತೆಯನ್ನುಸುರುತಿತ್ತು
ಮುಗಿಲೋಳಿ-ಭೋರ್ಗಾಳಿ-ಧೂಳಿಯಲಿ ರಸಿಕತೆಯ
        ಕುಸುರೊಡೆದು ಚೆಲ್ವರಿತು ತಣಿಯುತಿತ್ತು
ಮುಗಿಸಿ ಬಿರುಪಾಳಿಯನು ಗಾಳಿತಾ ಮಳೆಗಾಗಿ
        ಧ್ಯಾನಿಸುವ ಕಳೆ ಬೆಳೆದು ಕಾಣುತಿತ್ತು
ಮುಗಿಲು ಮಳೆ ಮೈದಾಳಿ ಇಳೆಯ ಹಂಬಲಕಾಗಿ
        ವಳವಳನೆ ಬಿಡು ಬಿಡದೆ ಇಳಿಯುತಿತ್ತು
ಸೊಗವಡೆದು ಸೋರುತಿಹ ಸೋನೆಗಳ ಸೇವಿಸುತ
        ನೆಲದಾಯಿ ಮೈಹಸಿಯ ತಳೆಯುತಿತ್ತು
ತವರೂರ ಬಳಿಸಾರಲುಬ್ಬುತ ದರಿಯಧರಕೆ
        ಮುತ್ತ ನೀಯುತ ನೀರು ಹರಿಯುತಿತ್ತು
ಕವಿಯ ಸವಿರಸ ಭಾವ ಗಿರಿಯೇರಿ ದರಿಸೇರಿ
        ಹೃದಯವಲ್ಲಮೃತವನೆ ಕರೆಯುತಿತ್ತು
ಬೀಗಿಹುದು ಇನಿರಸವು ನೋಡಿದತ್ತೆಲ್ಲಕಡೆ
        ಹನಿಯುತಿದೆ ಕೊನೆಯಿರದೆ ಅಮೃತ ಬಿಂದು !
ಭೋಗಿರಸಯೋಗಿ ತಾ ಮಣಿದತ್ತ ದಿನ ನಿತ್ಯ
        ತಣಿಯುವನು ಸುಧಾರಸದಲ್ಲಿ ಮಿಂದು

ಕವಿ ಬಂಧುವಿಗೆ

○

ದೃಷ್ಟಿಗೆ ಮೀರಿದ ತಿರೆಯಾ ತಿರುಳನು
ಅರುಹಿದ ಕವಿವರ ಬಂಧುವಿಗೆ
ಸೃಷ್ಟಿಯ ಅಣುವಿನ ಅನಂತ ಪ್ರಣಾಮು–
ದಲೆಗಳು ಭಾವಿಕ ಸಿಂಧುವಿಗೆ!
ಇಂದಿರ ಬಿಲ್ಲಿನ ರಂಗವ ನೆರೆಯುತ
ಭಾವದ ಎಳೆಗಳ ನೆಯ್ವನಿಗೆ!
ಸುಂದರ ವಸನವ ರಸಿಕರ ಹೃದಯಕೆ
ತೊಡಿಸುತ ತಣಿವನು ಗೆಯ್ವನಿಗೆ

ಬೇಸಿಗೆಯ ನಡುಹಗಲು
ನೇಸರನ ಬಿಸಿಲಿನಲಿ
ಮುಂಜಾವು ಸಂಜೆಯಲಿ
ರಂಜಿಸುವ ಪಂಜಿನಲಿ
ಇರುಳಿನಲರಾಗಸದಿ
ಬಿರಿದೆಸೆವ ಮಿಣುಕಿನಲಿ
ವರ ಪೆರೆಯ ನೊರೆಹಾಲು
ತಿರೆಯಲ್ಲಿ ಪಸರಿಸಲು
ಭುವಿಯ ಜನಸಂತೆಯಲಿ

ಕವಿದ ನಿಶಾವೋನದಲಿ
ಆ ಸಮಯ ಈ ಸಮಯ
ತಾಸು ದಿವಸೆನ್ನದಲೆ
ಭಾವದಾ ಬೆನ್ನೇರಿ
ದೇವ ಲೋಕವ ಸೇರಿ
ಸುರವನದ ಸೌರಭವು
ತರಲಿಹದಿ ಕರಗತವು
ಸ್ಫೂರ್ತಿ ಎಳೆತದಿ ಬೆರೆತು
ಮೂರ್ತಿ ವೈತಾ ಮರೆತು !

ಕಾವ್ಯ ಕೋಮಲೆ ಸಂಗ
ದಿವ್ಯ ಸುಖ ಕವಿಪುಂಗ !!

ಮಂಗಲಾತ್ಮನು ನೀನು
ಸಂಗಿಸಿತು ನಿಜ ತಾನು
ಕಸದಲ್ಲಿರಿಸೆ ದೃಷ್ಟಿ
ರಸಗಟ್ಟ ಈ ಸೃಷ್ಟಿ !

ದೀಪಾವಳಿ

೦

ಗಗನ ತೊರೆದು ಚಿಕ್ಕೆ ಹಿಂಡು ತಿರುಗು ಬೇಸ–
ರಳಿಯಲೆಂದು ಊರ ಬಳಿಯೆ ಸಾರಿದಂತೆಯೊ !
ಸೊಗವ ಬೀರಿ ನಗೆಯ ತೋರಿ ಬಗೆಗೆ ತೂರಿ
ಒಲವು ಬೀಗಿ ನಲಿವ ದೀವಿಗೆಗಳ ಸಂತೆಯೊ !
ಬೆಳಕಿನುಂಡೆ ತೊಳಪ ದಂಡೆ ! ಊರು ತಲೆಯ–
ಮುತ್ತಿ ಬಿತ್ತ ಸೆಳೆವ ಮಾಟ ದೀಪ ನೋಟವು
ಸಲುವೆ ನೇಹನುಂಡು ಕಳೆಯ ನಮ್ಮ ಜೀವ-
ಪಡೆಯೆ ದೀವಿಗೆಗಳ ಕೂಟ ! ಇದುವೆ ಪಾಠವು.
ಹೊಗೆಯು ಕೂಡಿ ನೆಗೆಯುತಿಹುದು ಗಗನವಲರ
ಒಲುಮೆ ಕೋರಿ ಮುಗಿಲ ತಟ್ಟಿ ದೀಪಗೋಲಕ !
ಅಗೋ ! ತಾರೆ ಬಳಗ ತಾನು ಸೇರಿ ಮಂದ-
ಹಾಸ ಹೊಂದಿ ಎಸೆವ ಮನುಜ ಬುದ್ಧಿದ್ಯೋತಕ !
ನಿಲಯ ನಿಬಿಡ ವೃಕ್ಷ ತೊಂಗಲಲ್ಲಿ ನಮ್ಮ
ಹರುಷ ಹಲವು ' ಹೂ ' ಗಳಾಂತು ಬಿರಿದುನೆರೆದಿವೆ
ತೊಲಗಿ ಈಗ ವರುಷಕೊಮ್ಮೆ ಮರಳಿದೀಪ
ವರಳಿಸಾಂಪ್ರದಾಯ ಸೌರಭವನ್ನು ತರುತಿವೆ !

ಅಮರ ಶ್ರೀ ಅರವಿಂದರು

○

ವಿದ್ಯದಾ ವಿಮಲ ಖಣಿ! ಮೌನ ಮುನಿ ಪಾವನಾ!
ಆಧ್ಯಾತ್ಮದಮರ ಮಣಿ! ಮಹಾಕಾವ್ಯ ಭಾವನಾ!
ಅರವಿಂದ ಊರ್ಧ್ವಮುಖಿ! ಸುಂದರ ಶಾಂತಮೂರ್ತಿ!
ಪರಿಪೂರ್ಣ ಯೋಗ ಸುಖಿ! ಚಂದಿರ ಧವಲಕೀರ್ತಿ
ಅಂತರಾತ್ಮ
ಅಂಗ ಪ್ರಾಗಣ ಸಂಗ
ಪರಿಮಿತಿ
ಹರಿಯಿತೆ!
ಅಪರಾತ್ಮ
ಅಂತವಿಲ್ಲದನಂತ
ನಿಜಗತಿ
ಬೆರೆಯಿತೆ!!
ರವಿಯು ಪಡುವಣೆಳಕಲ ಬಳಿಸಾರಲೇಕೆ?
ನವ್ಯ ಚೇತನ ತಾನೆರೆಯಲೀ ವಿಶ್ವಕೆ!
ಸವಿಯನರಿಯದೆ ಬಾಳುಗೋಳದಿ ಕೊರಗುವೆ!
ಕವಿದಮರಾತ್ಮ ಸುಧೆಯ ಸುರಿಯಲು ಕೋರುವೆ!
ಕಡೆಗಾಗೆ ಹಿಡಿದಿಟ್ಟ ಬೆಳಕತಾನು
ಇಡಿಯಾಗಿ ಏನೆಲ್ಲ ಬೆಳಗದೇನು?

ರಾಮರಾಜ್ಯ ತಾರದೆ?

○

ಮಳೆಯ ಸೋನೆ
ಇಳೆಗೆ ತಾನೆ
ನೆಲವ ತೊಯ್ಯ ಇಳಿಯದೇ ?

ದೂಳಿಕರಗಿ
ನೆಲಕೆ ಎರಗಿ
ಬಸಿರ ಬಯಕೆ ಹಿಂಗದೇ ?

ಗಾಳಿ ತಾಗಿ
ಹೂವ ಬಾಗಿ
ಸೊಗವ ಬಯಲ ತುಂಬದೇ ?

ತುಂಬಿ ಹಿಂಡು
ಗಂಧ ಕಂಡು
ಮಧುವಿಗಾಗಿ ಹಾರದೇ ?

ಚೆಲುವು ಬೀಗಿ
ಒಲವು ಮಾಗಿ
ಹೃದಯ ಬೆಸುಗೆಗೊಳ್ಳದೇ ?

ನೋವ ಮರೆದು
ನಲಿವ ಬೆರೆದು
ತೃಪ್ತಿ ರಾಜ್ಯವಾಳದೇ ?

ನಿಯತ ಕರುಮ
ನಮ್ಮ ಧರುಮ
ಜೀವ ಪಡೆದು ಬಾಳದೇ ?

ಸಮತೆ ಶಾಂತಿ
ಸತ್ಯ ಕಾಂತಿ
ಜಗದಿ ಮತ್ತೆ ನೆಲಸದೇ ?

ಏನೆ ಇರಲಿ
ಎಂತೆ ಬರಲಿ
ಸ್ಥಾಯಿ ಭಾವ ಬಾರದೇ ?

ದೇಶ ಭಕುತಿ
ನಮ್ಮ ಶಕುತಿ
ರಾಮರಾಜ್ಯ ತಾರದೇ ?

ಮೋಜಿನಾಟ ಸಾಕು

○

ದೇವ ನಿನ್ನ ಲೀಲೆಗಾಗಿ ಜಗದ
ಬಾಳು–ಬದುಕು ಎಲ್ಲ ತಾಸಂತೆ !

ಸಾವು-ನೋವು ನಗುವ ಬಗೆಯು ಸರಿಯೆ ?
ನಿನಗೆ ಜಂಜಡದೀ ಸರಿ ಸಂತೆ !

ರಾಜ-ರಂಕ, ಕೊಳಕು-ಥಳಕು ಬೇವು-
ಬೆಲ್ಲ ಬೇರೆ ಭೇದ ನಿನಗೇಕೆ ?

ಓಜದಲ್ಲಿ ಜಗವು ನಿಲ್ಲೆ ಲೀಲೆ
ಬರಿಯ ಬಯಲದೆನ್ನಬರಬೇಕೆ ?

ಇಲಿಯ ಬೆಕ್ಕು ಎಳೆವ ಆಟ ಕಂಡು
ಹೃದಯ ಒಲಿದು ಮರುಕಗೊಂಡಿಲ್ಲ

ಬೆಲೆಯು ಬಾರದೆಂಬ ಭಯವೆ ? ಬಲವು-
ನಲವು ಏಕವಾಗುವಲ್ಲಲ್ಲಿ !

ಜಗವು ನಲಿದು ಜೇನು ಸವಿದು ಬಾಳೆ
ಬರುವದೇನೊ ನಿನಗೆ ನಿಜಮರಣ !

ಸೊಗವು ನಿನಗೆ ತರಲು ನರಳಿ-ನರಳಿ
ಉರುಳ ಬೇಕೆ ನಮ್ಮದೀಹರಣ ?

“ ಎಳ್ಳು ಮನೆಯು ಪೊಳ್ಳು ಬಿಡದೆ ತುಂಬಿ-
ನಿಂತ ” ಹಿರಿದು ನಿನ್ನದಾ ವ್ಯಾಪ್ತಿ !

ಹಳ್ಳಿ ಬಡವನಲ್ಲಿ ಬೆಂದ ಒಡಲ
ಪೀಠದಲ್ಲಿ ಬೆಳಗುವಾದೀಪ್ತಿ !

ಎಲ್ಲಿ ನಿನ್ನ ನಾಮವಳಿಸುವಂಥ
ಬಲಿಕೆ ಶಕ್ತಿಯಿಡುವ ನಿನ್ನೋಟ ?

ಇಲ್ಲಿ ಅತ್ತೂ ಅಲ್ಲಿ ನಗುವದೆಲ್ಲಿ
ಸಾಕು ಹುಚ್ಚು ಮೋಜಗುಲ್ಲಾಟ !

ಸಮದೃಷ್ಟಿ

೦

ಹಿಂಡು ಮಕ್ಕಳ ತಾಯಿ
ಕಂಡೆ ನಿನ್ನಯ ಮಾಯೆ !

ನಿನ್ನ ಮರಿಗಳ ಬಿಟ್ಟು
ಅನ್ನವನು ನೀ ಮುಟ್ಟಿ !

ಕೊಳಚೆಯಿದ್ದರು ಜರಿಯೆ
ಬೆಳಕು ಬಂದರು ಸರಿಯೆ !

ಊರ ಹೊಲಸನು ನುಂಗಿ
ಸಾರು ಮಾಧುರಿ ಭಂಗಿ !

ಮೂಕ ಭಾವದ ಶರಣೆ
ನಾಕ ಲೋಕದ ಕರುಣೆ !

ಬೀಳು ಮನೆಗಳ ಸಂದಿ
ಬಾಳುವಂತಹ ಹಂದಿ !

ಒಡೆಯನದಿಲ್ಲ ಹಂಗ
ನೋಡುವದು ಜನ ವ್ಯಂಗ್ಯ !

ನಿನ್ನ ಮರಣದ ಕುತ್ತು
ಅಣ್ಣನೊಡಲಿನ ತುತ್ತು

ಇರಲು ಸಮರಸ ಭೋಗಿ
ಬರದುದಯ ನಿನಗಾಗಿ

ನಿಂದಕರ ಸರಿ ಬೆಲೆಯ
ಹೊಂದಿಸಿರುವರು ನೆಲೆಯ !

ಜನನ ಬಗೆಯನು ಮರೆದು
ಕಾಣುವರಿತ್ತ ನೆರೆದು

ಹೊಲಸಿನಲಿ ಜೀವನವು
ಬೆಳೆಯಲಿರೆ ಪಾವನವು

ಎತ್ತಿ ತೋರುವ ದಾನಿ
ನಿತ್ಯ ಜೀವನ ಧ್ಯಾನಿ

ಕರ್ತವ್ಯ ದಕ್ಷತೆ

○

ಅಚ್ಚ ತಿಳಿಗೊಳದಲ್ಲಿ ಜನಿಸಿರುವ ಕುಮುದೆಯಾ
ಬಿಚ್ಚು ಸ್ವದಳವನು ನೆಚ್ಚುತಲಿ ನಾನು
ಮುಚ್ಚಿ ನಯನ ಪರಿಮಳವ ಪಡೆಯಲು ತೊಡಗಿದೆನು
ಮುಚ್ಚಿದಳು ಪಳಕದಾ ಬಾಗಿಲವನು !
ಸದು ಮನದೆ ಕೇಳಿದೆನು ಬಗೆಬಗೆಯ ತೆರನಿಂದ
ಪದುಮಳಿಗೆ ಬಾಗಿಲವ ತೆರೆಯಲೆಂದು
ಮುದದೊಡೆಯ ತಾ ಬರದೆ ತೆರೆಯಲೂ ಬರದೆಂದು
ಕದವನಾ ಸೇರಿದಳು ಆ ಚಲುವೆಯು !
ಮೂಡಣದ ಅಂಚಿನಲಿ ದಿನಮಣಿಯು ತಾ ಬರಲು
ದೂಡಿದಳು ಕೂಡಲಾ ಬಾಗಿಲವನು
ಹಾಡುತಲಿ ಹಾರುತಲಿ ಹರುಷದಲಿ ತೆರಳಿದೆನು
ನೋಡಿದೆನು ನುಡಿಯ ನಡೆಸುವ ಛಲವನು

× × × ×

ಹೇಳಿತಾ ತುಂಬಿಗೀ ಮನದುಂಬಿ ಎಲ್ಲರಿಗೆ
ಕೇಳಿಲ್ಲಿ ನಾವೆಲ್ಲರಿಂದಿನೊರೆಗೆ
ಪಾಲಿಸಳೊಡೆಯನಾಜ್ಞೆ ಅಂತೆಯೇ ಕಮಲಳಿಗೆ
ಲಕುಮಿಯಾ ಜನನಿಯೆನುವರೆಲ್ಲೆಡೆಗೆ !

ತಾಯಿ ರಕ್ಷೆಯಿರೆ

○

ಮುದವ ನೂಡಿಸಿ ಹರಿಸಿ ಮಗುವಿಗೆ
ಇರಿಸೆ ಚೇತನೆ ಬದುಕದು !
ಬಿದಿಯು ಬೀಸಿದ ನೂರು ಜಾಲದ
ನೋವು ಹತ್ತಿರಬಾರದು !
ಹೊರಳಿದತ್ತಲು ಕಾಣ್ಣೆ ನಿನ್ನಾ—
ತುಂಬ ನಗೆ ಮೊಗ ರಕ್ಷೆಯು !
ಸರಿವುದೆತ್ತಲೊ ಕರ್ಮ ಸಿಂಚಿತ
ಚಿಂತೆಯೆಂಬಾ ಶಿಕ್ಷೆಯು !
ಏನು ಕರುಣೆಯು, ಎಂಥ ಹೃದಯವು !
ಏನು ಲಾಸ್ಯವು ತಾಯಿಯೆ !
ನಾನು ನೋಡಲು ನೀನು ಸಿದ್ಧಳು
ನಕ್ಕು ನಗಿಸಲು ಮಾಯಿಯೆ !
ಬಿರಿದ ಮಲ್ಲಿಗೆ ರದನ ಕಾಂತಿಯು
ಸೂಸಿ ಬರುವದು ಗಂಧವು
ಹರಿಯುವಳಿಯದು ಕಾಂತಿಕುಂದದು
ನಿತ್ಯನೂತನದಂದವು !
ಹಾಸ ಮಾಸದಿ ರಮ್ಯ ವಡೆಯುತ
ಬಿಡದೆ ಸೈಪಿಡೆ ನೀನಿರೆ !
ಹಾಸವಳಿಯುತ ಸವಿಯೆ ಬಾಳಾ
ಮೃತವ ಬಾಳಲು ನಾನಿರೆ !

ಹರಸು ತಾಯೆ !

○

ನೀನಿರಲು ಸೊಗವಿತ್ತು ನೀನಗಲೆ ಜಾರಿತ್ತು
   ಕಾಳರಾತ್ರಿಯು ತಾಯಿ ಬಂತು ಕವಿದು
ನಿನ್ನಯಾ ಪುಣ್ಯದಲಿ ತಂದೆಯಾಸರೆಯೆಲ್ಲಿ
   ಬಾಳಲ್ಲಿ ಮುಂಬೆಳಗು ಹರಡುತಿಹುದು !
ನಮ್ಮಗಲಿ ಸಂದಿಹವು ಹನ್ನೆರಡು ಬರಿಸಗಳು
   ನಿನ್ನಿಚ್ಛೆ ಫಲಿಸಿಹುದು ನೋಡು ಮಾತೆ !
ನಮ್ಮ ಬಾಳಿನ ಬಳ್ಳಿದಾಂಗುಡಿಯು ನಿಡುವೃತ್ತ
   ಚಲ್ಲವರಿದಿಹುದಿಂದು ಹರಸುದಾತೆ !
ನಿನ್ನಾತ್ಮ ಜೋತಿಯೊಗೆದ ಪ್ರಕಾಶಹಾಸವದು
   ನಮ್ಮೆಲ್ಲ ಮನ ಮನೆಯು ಬೆಳಗುತಿಹುದು
ಜೊನ್ನನಗೆ ಚೈತನ್ಯ ಚಿಮ್ಮುತ್ತಲಿದೆ ಧನ್ಯ
   ಹೇಮಲತೆಯಿಂದ ಬಗೆ ತಣಿಯುತಿಹುದು !
ಆರು ವರುಷದ ಬಾಲೆ ನಿನ್ನ ಹೆಸರಿನ ಮೇಲೆ
   ತಾಯಾಗಿ ನಮ್ಮನ್ನು ನಲಿಸುತಿಹಳು
ಚಾರು ನಿನ್ನಯ ತಾಯಿ ಅಕ್ಕರೆಯ ನಮ್ಮಾಯಿ
   ಇಂದಿಗೂ ನಮ್ಮನ್ನು ಸಲಹುತಿಹಳು !
ಸಿಂಗಾರದಾಗೌರಿ ನಿನ್ನಯಾ ನಲ್ಗುವರಿ
   ಮನೋಹರ ಪಡೆದಿಹಳು ಮನಸಿನಾಸೆ !

ಬಂಗಾರದಾ ಬಾಳು ಕುಂದಣಿಸುತಿಹಳಹಳು
ಕುಸುಮ ಕೋಮಲೆ ತಾನು ನಗೆಯಬೀಸೆ!
ನವ್ಯವದು ಮೈಯೆತ್ತಿ ಕಿರಿಸೊಡರು ತಾಹೊತ್ತಿ
ತೋರುವಾ ಲೀಲೆಯದು ಎಂಥಮಾಯೆ!
ಶಿವನ ಮಾನಸ ಪುತ್ರಿ ನಾಗಿನಿಯು ಹೆಡೆಯೆತ್ತಿ
ಸಂತಸವ ನೀಡುವಳು ನೋಡುತಾಯೆ!
ಚಲುವಿಕೆಯೆ ಮಗುವಾಗಿ ಬಂದಂತೆ ತಾನಾಗಿ
ಸುರೇಶನವ ಬಂದ ಮೊದಲಿಗನಾಗಿ
ನಲಿನಲಿದು ನಲಿಸಿದನು ಕಣ್ಣೀರ ಕರೆಸಿದನು
ನಿನ್ನೆಡೆಗೆ ಸಾಗಿದನು ನಮ್ಮ ತೊಲಗಿ
ಶಶಿಕಲೆಯು ಕಳೆಗುಂದಿ ನಿನ್ನಾಶ್ರವನು ಹೊಂದಿ
ಅಮಾಸಿಯ ಸಲಿಸಿದಳು ಇಹವಮಿಕ್ಕಿ
ನಮ್ಮನ್ನು ಪೊರೆದವಳು ನಮ್ಮವರ ಪೊರೆವವಳು
ಅಲ್ಲಿಯೂ ನಿನಗಿಹುದು ಕಾರ್ಯಭಾರ
ನಮ್ಮಿಚ್ಛೆ ಸಲ್ಲಿಸೌ ಸುರೇಶ ಶಶಿಕಲೆಗೂ
ಒಸಗೆಯಲಿ ಅಕ್ಕಿಯೂ ಕಾಳು ತೂರು!
ದುಡಿತದಲಿ ದುಗುಡಿರದೆ ಸೊಬಗು ತಾತರಲೆಂದೆ
ನಮಗಾಗಿ ದುಡಿಯುವನು ಬಿಡದೆ ತಂದೆ!
ಕುಡಿಯಿಡಲಿರಲಿ ಹರಕಿ ನಮ್ಮ ಬಾಳಿನ ಕರಿಕಿ
ಕರುಣಿಸೌ ಬೇಡುವೆನು ಭಕ್ತಿಯಿಂದೆ!

ಮಗು

೧

ಹತ್ತು ತಿಂಗಳ ಮುದ್ದು ಮಗುವಿಗೆ
ಮನದ ಯುಕ್ತಿಯ ಬಲವಿದೆ
ಹೆತ್ತ ತಾಯಿಯು ಮುತ್ತ ಕೊಡಲದು
ನಗೆಯ ಕಾಣಿಕೆ ಗೊಡುತಿದೆ!
ಮುಳಿದು ಗರ್ಜಿಸೆ ಬಿಗಿದು ತುಟಿಯನು
ನೋವು ಬೀರುವ ಹಟವಿದೆ
ಕುಳಿತ ಗದ್ದುಗೆ ಕಂಪಿಸಿದರೂ
ಕೈಯ ಕೆಳಗಿಡು ಹದವಿದೆ!
ಕಡಿದ ಇರವಿಯ ದಂಡು ಕಾಣಲು
ಹರಿದು ಹೋಗುವ ಸಾಹಸ!
ಪಡೆದ ತಂದೆಯು ಬರಲು ಹೊರಗಡೆ
ಏನು ಹೇಳಲಿ ಸಂತಸ!
ತಾಳ ನುಡಿಸುತ ಹಾಡು ಹೇಳಲು
ಬಿಡದೆ ಕೈಗಳ ಬಡಿವುದು!
ಬಾಳು ತನ್ನದು ದಿನವು ಬಳೆಸುತ
ನಮ್ಮ ನಡೆ ನುಡಿ ಪಡೆವುದು!
ನಮ್ಮ ಸಂಸ್ಕೃತಿ ಹಂದರಾಕೃತಿ
ಬಳ್ಳಿದಾಂಗುಡಿ ಯಿಡುವದು
ಚೆಲ್ಲುವರಿಯುತ ಚೆಲುವು ಸೂಸುತ
ಹಬ್ಬಿ ಮುದದಲಿ ನಲಿವುದು.

ಒಂದು ನೋಟ

○

ಹೊಂಬಿಸಿಲು ರಂಜಿಸಲು ತಂಬೆಲರು ಅಡಿಯ[illegible]
  ಬಾನಾಡಿ ಮುದಗೂಡಿ ಹಾರುತಿತ್ತು
ತುಂಬಿರುವ ಹಾಲ್ಗಾಳ ತೆನೆವೃಂದ ರಸಬಾಳ
  ಬಾ ಎಂದು ತಲೆವಾಗಿ ಕರೆಯುತಿತ್ತು !

ನೆಲವೆಲ್ಲ ನಾಕಾಗಿ ನಾಕವೇ ನೆಲವಾಗಿ
  ರಸಪೂರ ಬಂದಂತೆ ತೋರುತಿತ್ತು
ಕೆಲಚಣಗಳಿರಲು ಸೊಗ, ಹೇರಲ್ಲ ಬಾಳ ನೊಗ
  ಆಹುದಹುದು, ರಸಗಳಿಗೆ ಬೀರುತಿತ್ತು !

ಗರಿಮೂಡಿ ಸಂತಸವು ಸೇರಿಹುದು ಆಗಸವು
  ಎಂಬಂತೆ ಹವುಳವಲಿ ತೇಲುತಿತ್ತು
ಬರದು ಬಳಿ ಬೇಸರವು ಅವಕ್ಕಿಲ್ಲಆಸರವು
  ಹಾಲ್ಗಡಲ ಈಜುತ್ತ ನಲಿಯುತಿತ್ತು

ಬಿದಿಯು ತಾ ಕೊರೆದಿರುವ ಚಿತ್ರಗಳ ಸಿಂಗರವ
  ತೆರೆಯ ಮರೆನೆಲೆ ನಿಂತು ನೋಡುತಿತ್ತು
ಬಾಂದಳದಿ ಮೋಡಪಡೆ ದಾಳಿಯಿಡಲೆಲ್ಲಿಕಡೆ
  ನಡೆತರುವ ಕಳೆಯೊಡೆದು ಮೂಡುತಿತ್ತು

ಹೊತ್ತರಿದು ಸರಿತಾಳ ಹಾಕಲಮು ಸ್ವರಮೇಳ
ತಿಳಿದಂತೆ ಬಿರುಗಾಳಿ ಬೀಸುತಿತ್ತು
ಹೊತ್ತಿಳಿಯೆ ಗೂಡತ್ತ ಬಾನಾಡಿ ಹಾರುತ್ತ
ಗಾಳಿಯಲಿ ಎರಕೆಗಳ ಹಾಸುತಿತ್ತು

ಎದೆಯ ತಿದಿಯೂಮುವಿಕೆ ತರುತಲಿರೆ ಭಯವವಕೆ
ಆಸೆ ಕುಡಿಯಾಸರಕೆ ನೂಕುತಿತ್ತು !
ಮುವಗೊಡುವ ಕರುವಾಡ ಬದಿಯ ಬರಲಾ ಗೂಡ
ಮೋನವಲಿ ಕಾಲವನು ಹಾಕುತಿತ್ತು

ಮುಗಿಲುಗಳ ಗದ್ದರಣೆ ಗೂಡುತೂಗುವ ಬನಣೆ
ನಿಟ್ಟುಸಿರನಟ್ಟುತ್ತ ಕಾಡುತಿತ್ತು
ಮುಗಿಲುಗಳ ಬಿರುಕಿನಲಿ ಚಂದ್ರಿಕೆಯು ಚೆಲ್ಲುತಲಿ
ಸೊಗದಾಸೆ ನುರುಕಳಿಸಿ ನೋಡುತಿತ್ತು

ಬಲಿಯುವದು ಆ ಬೆಳಕು ಇಳಿಸುವದು ಸವಿಸೆಳಕು
ಕವಿದಿರುಳು ಕಣಿಯನ್ನು ನುಡಿಯುತಿತ್ತು
ಗೆಲುವಿನಾ ಬಾಳನಗೆ ಸೋಲಿನೀ ಕೆಡಕು ಹಗೆ
ಬರುವ ಬಗೆ ಈನೋಟ ಮಿಡಿಯುತಿತ್ತು !

ಸಗ್ಗದಲ್ಲಿ

೧

ಓಗ ದಲ್ಲಿ
ಸಗ್ಗದಲ್ಲಿ
ಸಭೆಯು ತಾನೆ ಕೂಡಿತು

ಶಾಸ್ತ್ರಕಟ್ಟಿ
ಕೈಯ ತಟ್ಟಿ
'ಶ್ರೀ'ಯ ಕಂಠ ಹಾಡಿತು!

ಅದುವೆ ನೋಡು
ಮನದ ನಾಡು
ಎದೆಯು ಬೆಳೆದ ಚೆಲ್ವಿಕೆ

ಒಲವು ಹೊಂಬಗು
ಕಲೆಯ ಮೆರಗು
ಒರೆಯುಲಿವುದೆ ಮೊಸ್ತ್ರಿಕೆ!

ಹೊನ್ನ ನಾಡು
ರನ್ನ ಬೀಡು
ಮಿಂಚು ದೀಪ ಕಾಪರೊ

ಗಂಧ ತೀಡಿ
ಚಂದ ಮೂಡಿ
ನಿಂದ ಮಹಾ ಭಾವನ !

ಎರೆಯ ನೆಲವು
ತೊರೆಯ ಜಲವು
ಕರೆಯು ನಾಡ ಕುಂಕುಮನು

ಗಿರಿಯ ಸಾನು
ಸರಿಯು ತಾನು
ಹಿರಿಯನೆನಿಸಿ ಮೆರೆವನು !

ಧವಲ ಮುತ್ತು
ಹವಳ ಸುತ್ತು
ಧನ್ಯ ನೆಲದ ಸೊತ್ತನು

ತೇಗು ತುತ್ತಿ
ನಗದ ನೆತ್ತಿ
ಬಗೆಯ ತಣಿಸ ಚಿತ್ರನು

ಕಡಲ ನೀರು
ಬೆಡಗಿನೂರು
ಸೈನ್ಯ ಸಿರಿಯ ನಾಡಿನು

ನನ್ನ ಭಾಗ್ಯ

○

ಝುರಿ ತೊರೆಯು ಗಿರಿಸಾನು ಕಲ್ಮುಳ್ಳು ಹಾಲ್ಜೇನು
ಏನುಂಟು ಏನಿಲ್ಲ ನನ್ನ ಸುತ್ತು !
ಇರುಳು ಸಹ ನಾನೆಸಗಲಾಕರ್ಮ ವಿಧಿ ನಿಯತ
ಕಹಿಮಧುರ ಫಲಕಣವು ಕೈಯ ತುತ್ತು !
ದಿನ ನಿತ್ಯ ತಿರೆಯಲ್ಲಿ ಇನಕಿರಣ ತೊರೆ ಬೀಗಿ
ಇನಿದೊಗೆವ ವರಕಾಂತಿ ಇಳೆಗೆ ಸೊತ್ತು !
ಮನೆಯಲ್ಲಿ ಬೆಳಕಿಂಡಿಯುಗಲಳತೆ ಒಳಗಿಳಿವ
ರವಿಕಿರಣಗಳ ಬೆಳಕು ಕಳೆಯ ಬಿತ್ತು !
ಭುವಿಯಲ್ಲಿ ಹವೆಯು ತಾ ಚಲಿಸುವದು ಹಲವು ಬಗೆ
ಸೊಂಪೊಗೆವ ಇಂಚರವ ಮಾತು ಹೊತ್ತು
ಸವಿಗೊಂಡು ಕಿವಿಗಿಳಿದು ಹೃದಯದಲ್ಲುಳಿಯಲಾ
ನುಡಿಗಳಿನಿತಿರಲೆನ್ನ ಸ್ವಾತಿ ಮುತ್ತು
ಭಾವಗಡಲಲೆಯುಕ್ಕಿ ಬರಲು ಆ ಶಬ್ದನಿಧಿ
ಧನಿ ರಚಿತ ವರಕಾವ್ಯ ಮಾಲೆ ಯೋಗ್ಯ !
ದೇವಿನುಡಿ ದಾಯಿಯಡಿ ಎದ್ದ ಭಾವದಲಿದ್ದ
ಶಬ್ದಗಲಿಸಿಡಲೆನ್ನ ಭಕ್ತಿ ಭಾಗ್ಯ !

ಸನಿಹದ ಶಾಲೆಯ ಶಿಕ್ಷಕರಲ್ಲಿಯೂ, ಮಿತ್ರರಲ್ಲಿಯೂ ಈ ವಿಷಯವಾಗಿ ಚರ್ಚಿಸಿ ಸಂಶಯ, ಸಮಸ್ಯೆಗಳನ್ನು ತಿಳಿಸಿ ತಮ್ಮ ಅಮೂಲ್ಯ ಅಭಿಪ್ರಾಯಗಳನ್ನು ತಿಳಿಸಬೇಕು; ಗೆಳೆಯರ ವಿಳಾಸಗಳನ್ನು ತಿಳಿಸಿ ಸ್ನೇಹಮಾಲಿಕೆ ಬೆಳೆಸಬೇಕು.

ಅರಳಲಿರುವ ಕುಸುಮಗಳು

ಎಡರು ತೊಡರು ಕಾದಂಬರಿ ಕೆ.ಪು.ಶಿವಲಿಂಗಯ್ಯ
ಹಳ್ಳದ ದಂಡೆಯಲ್ಲಿ .... ,, ... "ಸಿಸು"
ಸತ್ತವರ ಸಮ್ಮೇಲನ...ಕಥಾಸಂಗ್ರಹ...ಶಂ.ಗು.ಬಿರಾದಾರ
ಜೊಳ್ಳಲ ಬಸುರಿ....ಕವಿತೆ....ಪರಶುರಾಮ ಚಿತ್ರಗಾರ
ಗಾಳಿಪಟ....ಮಕ್ಕಳ ಕವಿತೆಗಳು....ಕುರಾಡಿ ಸೀತಾರಾಮ ಅಡಿಗ.

ಅಲ್ಲದೆ ಶ್ರೀಕೃಷ್ಣ ಪಾಟೀಲ, ಇತ್ಯಾದಿ ಶಿಕ್ಷಕ ಮಿತ್ರರ ಪುಸ್ತಕಗಳು ಮತ್ತು ಶ್ರೇಷ್ಠಸಾಹಿತಿಗಳ ಮಕ್ಕಳ ಏಕಾಂಕ ಸಂಗ್ರಹಗಳು.

ನಮ್ಮ ಮುಂದಿನ ಪ್ರಕಟನೆ ಅಚ್ಚಿನಲ್ಲಿದೆ:!

ಶ್ರೀ ಈಶ್ವರಚಂದ್ರ ಚಿಂತಾಮಣಿಯವರ ಅನೇಕ ಕಡೆ ರಂಗಭೂಮಿಯ ಮೇಲೆ ಪ್ರಯೋಗಿಸಲ್ಪಟ್ಟ ಜನಪ್ರಿಯವಾದ ನಾಟಕ!

ಮತ್ತು

ಶ್ರೀಮಿರ್ಜಿ ಅಣ್ಣಾರಾಯರ

'ಕನ್ನೆಯರಿಗೆ'

ಕಾದಂಬರಿ.

ಭಾರತೀ ಪರಿಚಯ

ಸಾಹಿತ್ಯ ಸರ್ವೇಶ್ವರಿ ಸರಸತಿಯ ಸದ್ಭಕ್ತರಾದ ಶಿಕ್ಷಕರು ಸಮಾಜದ ಸೇವೆಗೈಯುತ್ತ ಸಾಹಿತ್ಯ ಸೇವೆಯಲ್ಲೂ ಸಮಭಾಗಿಗಳಾಗುತ್ತ ಬರುತಿರುವದು ಸಂತಸದ ಸಂಗತಿ. ಇತ್ತಿತ್ತಲಾಗಿ ಪ್ರಾಥಮಿಕ ಶಿಕ್ಷಕ ವರ್ಗದಲ್ಲೂ ಸಾಹಿತಿಗಳ ಬೆಳೆ ಹುಲುಸಾಗಿ ಬೆಳೆಯತೊಡಗಿದೆ. ಆದರೂ ಆಗಾಗ್ಗೆ ಅನಾನುಕೂಲ ಪರಿಸ್ಥಿತಿ, ಆರ್ಥಿಕ ಮುಗ್ಗಟ್ಟು ಇತ್ಯಾದಿ ಬಿರುಬಿಸಲು, ಬಿರುಗಾಳಿ, ಬಿರುಮಳೆಗಳ ಸೆಳಕು ಬೆಳೆಯನ್ನು ನೆಲಕ್ಕೆ ಕೆಡವುತ್ತಲಿದೆ. ಒಂದೆಡೆ ಆ ಬೆಳೆಗೆ ಹದವಾದ ರಾಬು, ಸಕಾಲ ಮಳೆ ಅನುಕೂಲ ಗಾಳಿ ದೊರೆಯದೆ ಬೀಜ ಮೊಳಕೆಯೊಡೆಯುತ್ತಲೇ ಬೇರನ್ನಪ್ಪಿಕೊಳ್ಳುತ್ತಲಿದೆ. ಅಂಥ ಅಂಕುರಗಳಿಗೆ ನಿರೆರೆದು ನಿಲ್ಲುವಂತೆ ಮಾಡಿ ಇಂಬೆಳಸು ಬೆಳೆದು ರಸಭರಿತ ಕಾಳಿನ ಕಣಜವನ್ನೇ ನೀಡಬೇಕೆಂಬುದು ನಮ್ಮ ಹೆಗ್ಗುರಿ.

ಬಡಪಾಯಿ ಪ್ರಾಥಮಿಕ ಶಿಕ್ಷಕರ ಮೂಲೆಗುಂಪಾದ ಸಾಹಿತ್ಯ ಕೃತಿಗಳನ್ನು ಹೊರತರುವದರ ಜೊತೆಗೆ ನಾಳಿನ ನಾಡಿನ ನಾಯಕರಾದ ಇಂದಿನ ಮಕ್ಕಳ ಸಾಹಿತ್ಯವನ್ನೂ ತುಂಬಿಕೊಡುವ ಹಿರಿಯಾಸೆಯಿಂದ ಈ ಬೃಹತ್ಕಾರ್ಯಕ್ಕೆ ಕೈ ಹಾಕಿದ್ದೇವೆ. ಇಂತಹ ಕಾರ್ಯದ ಸದುಪಯೋಗಕ್ಕೆ ಸಕಲ ಶಿಕ್ಷಕ ಮಿತ್ರರ ಬಲವಾದ ಬೆಂಬಲವನ್ನು ಕೋರುತ್ತೇವೆ. ಈ ಪವಿತ್ರ ಸೇವೆಯಲ್ಲಿ ನಮಗೆ ಸುಖವಿದೆ. ಸಂತಸವಿದೆ. ನೀವೆಲ್ಲ ನೆರವು ನೀಡಿ ನಮ್ಮಿಂದ ಸೇವೆ ಸಲ್ಲಿಸಿಕೊಳ್ಳುವಿರಾಗಿ ಆಶಿಸಿದ್ದೇವೆ.

ಪ್ರಾಥಮಿಕ ಶಿಕ್ಷಕರ ಪ್ರೋತ್ಸಾಹನಾರ್ಥವಾಗಿ ತೆರೆದ

ಭಾರತೀ ಸಾಹಿತ್ಯ ಭಂಡಾರ ಯರನಾಳ